www.veerashaivamahasabha.org e-mail: info@veerashaivamahasabha.com

# ಅಖಿಲ ಭಾರತ ವೀರಶೈವ ಮಹಾಸಭಾ (ರಿ.)

ನಂ.17/4, 'ವೀರಶೈವ-ಲಿಂಗಾಯತ ಭವನ', ರಮಣಮಹರ್ಷಿರಸ್ತೆ, ಸದಾಶಿವನಗರ, ಬೆಂಗಳೂರು-560 080,
Tel: 080-2360 2177, Tel Fax:080-2361 8400

ಸಂಖ್ಯೆ: ಎ.ಜಿ.ಎಂ./2018-19 ದಿನಾಂಕ: 24-12-2018

## 44ನೇ ಪ್ರತಿನಿಧಿಗಳ ವಾರ್ಷಿಕ ಸಾಮಾನ್ಯ ಸಭೆಯ ತಿಳುವಳಿಕೆ ಪತ್ರ

ಅಖಿಲ ಭಾರತ ವೀರಶೈವ ಮಹಾಸಭೆಯ 2017-18ನೇ ಸಾಲಿನ 44ನೇ ಪ್ರತಿನಿಧಿಗಳ ವಾರ್ಷಿಕ ಸಾಮಾನ್ಯ ಸಭೆಯನ್ನು ಮಹಾಸಭೆಯ ಅಧ್ಯಕ್ಷರಾದ **ಡಾ. ಶಾಮನೂರು ಶಿವಶಂಕರಪ್ಪ, ಶಾಸಕರು, ಇವರ ಅಧ್ಯಕ್ಷತೆಯಲ್ಲಿ "ತರಳಬಾಳು ಕೇಂದ್ರ ಸಭಾಂಗಣ", 3ನೇ ಮುಖ್ಯರಸ್ತೆ, 2ನೇ ಬ್ಲಾಕ್, ತರಳಬಾಳು ಮಾರ್ಗ, ಆರ್.ಟಿ.ನಗರ** (ಬಿ.ಡಿ.ಎ.ಕಾಂಪ್ಲೆಕ್ಸ್ ಪಕ್ಕ), **ಬೆಂಗಳೂರು-560032 ಇಲ್ಲಿ ದಿನಾಂಕ: 19-01-2019ನೇ ಶನಿವಾರ ಮಧ್ಯಾಹ್ನ 12.00 ಗಂಟೆಗೆ ಈ ಕೆಳಗಿನ ಕಾರ್ಯಸೂಚಿಯಲ್ಲಿ ತಿಳಿಸಿರುವ ವಿಷಯಗಳನ್ನು ಚರ್ಚಿಸಿ ನಿರ್ಣಯಿಸಲು ಕರೆಯಲಾಗಿದೆ.** ಆದ್ದರಿಂದ ಪ್ರತಿನಿಧಿಗಳ ಸಾಮಾನ್ಯ ಸಭೆಯ ಮಾನ್ಯ ಸದಸ್ಯರೆಲ್ಲರೂ ಸಭೆಗೆ ಆಗಮಿಸಬೇಕಾಗಿ ವಿನಂತಿ.

**ಕಾರ್ಯಸೂಚಿ**

1. ಪ್ರಾರ್ಥನೆ
2. ಸ್ವಾಗತ
3. ಶ್ರದ್ಧಾಂಜಲಿ
4. ಸಭೆಯ ತಿಳುವಳಿಕೆ ಪತ್ರ ಓದಿ ದಾಖಲಿಸುವುದು
5. ದಿನಾಂಕ 07-01-2018ರಂದು ನಡೆದ ಹಿಂದಿನ ಸರ್ವಸದಸ್ಯರ ಸಾಮಾನ್ಯ ಸಭೆಯ ನಡವಳಿಕೆಗಳನ್ನು ಓದಿ ದೃಢೀಕರಿಸುವುದು
6. 2017-18ನೇ ಸಾಲಿನ **"ವಾರ್ಷಿಕ ವರದಿ"** ಮಂಡನೆ ಮತ್ತು ಅಂಗೀಕಾರ
7. 2017-18ನೇ ಸಾಲಿನ **"ಲೆಕ್ಕಪರಿಶೋಧಕರ ವರದಿ"** ಮಂಡನೆ ಮತ್ತು ಅಂಗೀಕಾರ
8. 2018-19 ಮತ್ತು 2019-20ನೇ ಸಾಲಿನ ಮಹಾಸಭೆಯ ವಾರ್ಷಿಕ ಆಯ-ವ್ಯಯದ (ಆದಾಯ-ವೆಚ್ಚಗಳ) ಅಂದಾಜು ಪಟ್ಟಿಯ ಮಂಡನೆ ಮತ್ತು ಅಂಗೀಕಾರ
9. 2018-19ನೇ ಸಾಲಿಗೆ ಲೆಕ್ಕಪರಿಶೋಧಕರನ್ನು ನೇಮಿಸುವುದು ಮತ್ತು ಅವರ ಸಂಭಾವನೆಯನ್ನು ಗೊತ್ತುಪಡಿಸುವುದು
10. ಅಧ್ಯಕ್ಷರ ಅಪ್ಪಣೆ ಮೇರೆಗೆ ಬರಬಹುದಾದ ಇತರೆ ವಿಷಯಗಳು
11. ಅಧ್ಯಕ್ಷರ ಭಾಷಣ
12. ವಂದನಾರ್ಪಣೆ

**(ಈಶ್ವರ ಬಿ. ಖಂಡ್ರೆ, ಶಾಸಕರು)**
ಮಹಾಪ್ರಧಾನ ಕಾರ್ಯದರ್ಶಿ

**ವಿಶೇಷ ಸೂಚನೆ:**

1. ಸಭೆಯಲ್ಲಿ ಚರ್ಚಿಸಲಿಚ್ಛಿಸುವ ವಿಷಯಗಳನ್ನು ಟಿಪ್ಪಣಿಯೊಂದಿಗೆ ಮಾನ್ಯ ಸದಸ್ಯರು ದಿನಾಂಕ: 10-01-2019 ರೊಳಗಾಗಿ ಕೇಂದ್ರ ಕಛೇರಿಗೆ ಕಳುಹಿಸಿಕೊಡಲು ಕೋರಿದೆ.
2. 2017-18ನೇ ಸಾಲಿನ ವಾರ್ಷಿಕ ವರದಿಯನ್ನು ಮಹಾಸಭೆಯ ಜಾಲತಾಣದಲ್ಲಿ (Website) **www.veerashaivamahasabha.org** ವೀಕ್ಷಿಸಬಹುದಾಗಿದೆ ಹಾಗೂ ಪ್ರತಿಗಳನ್ನು ಮಾನ್ಯ ಸದಸ್ಯರುಗಳಿಗೆ ಸಭೆಯ ಮುಂಚಿತವಾಗಿ ವಿತರಿಸಲಾಗುವುದು.
3. ಈ ಸಭೆಗೆ ಆಗಮಿಸುವ ಸದಸ್ಯರು ಮಹಾಸಭೆಯ ಗುರುತಿನ ಚೀಟಿ ಹಾಗೂ ಈ ತಿಳುವಳಿಕೆ ಪತ್ರವನ್ನು ತಮ್ಮೊಡನೆ ತರಬೇಕೆಂದು ವಿನಂತಿಸಲಾಗಿದೆ.
4. ಮಹಾಸಭೆಯ ಸಂವಿಧಾನ ನಿಯಮ 22(11)ರ ಪ್ರಕಾರ ಪ್ರತಿನಿಧಿಗಳ ಸಾಮಾನ್ಯ ಸಭೆಗೆ ಅನುಮತಿ ಇಲ್ಲದೇ ಸತತವಾಗಿ ಮೂರು ಸಭೆಗಳಿಗೆ ಗೈರುಹಾಜರಿ ಆದಂತಹ ಸದಸ್ಯರುಗಳು ತಮ್ಮ ಸಾಮಾನ್ಯ ಸಭೆಯ ಸದಸ್ಯ ಸ್ಥಾನವನ್ನು ಕಳೆದುಕೊಳ್ಳಲಿದ್ದಾರೆ.

ಗೆ,

ಮಹಾಸಭೆಯ ಪ್ರತಿನಿಧಿಗಳ ಸಾಮಾನ್ಯ ಸಭೆಯ ಸದಸ್ಯರುಗಳಿಗೆ.

www.veerashaivamahasabha.org e-mail: info@veerashaivamahasabha.com

# All India Veerashaiva Mahasabha (R.)

No.17/4, 'Veerashaiva-Lingayath Bhavana', Ramanamaharshi Road (Bellary Road), Sadashivanagar, Bangalore-560 080, Tel: 080-2360 2177, Tel Fax:080-2361 8400

**No: RGM/2018-19** **Date: 24-12-2018**

## 44th REPRESENTATIVE ANNUAL GENERAL BODY MEETING NOTICE

The Meeting of the 44th Representative Annual General Body of All India Veerashaiva Mahasabha for the Year 2017-18 is convened on **Saturday the 19th January 2019 at 12.00 p.m. at "Taralabalu Kendra Sabhangana", 3rd Main, 2nd Block, Taralabalu Marga, R.T.Nagar, (Near BDA Complex), Bangalore-560 032** to discuss the subjects mentioned in the Agenda below. **Dr. Shamanur Shivashankarappa,** MLA, and President of the Mahasabha will preside over the Meeting. All the members of the Representative General Body of the Mahasabha are therefore, requested to make it convenient to attend the said Meeting.

**AGENDA**

1. Invocation
2. Welcome
3. Obituary references
4. To read and record the Meeting Notice
5. To read & confirm the Proceedings of the previous Annual General Body Meeting held on 07-01-2018
6. To present the Annual Report for the year 2017-18
7. To present the Audit Report for the year 2017-18
8. To present the Budget proposal for the year 2018-19 and 2019-20
9. Appointing Auditor for the year 2018-19 and to fix the fee
10. Any other subjects with the permission of the Chair
11. President's speech
12. Vote of thanks

**(Eshwar B. Khandre,MLA)**
Secretary General

**NOTE:**

1. The members desiring to discuss any other subjects are requested to send a brief note so as to reach the Mahasabha office on or before 10-01-2019.
2. The Annual Report for 2017-18 and Audit Reports will be distributed to the members before commencement of the meeting. Annual Report is being uploaded shortly to Website **www.veerashaivamahasabha.org**
3. The Members are requested to come with meeting notice and Mahasabha I.D.Card.
4. As per rule 22(11) of mahasabha, the representatives for general body meeting, absenting themselves continuously for 3 meetings without permission will lose their membership

To,

The Representative General Body Members of the Mahasabha.

# ಅಖಿಲ ಭಾರತ ವೀರಶೈವ ಮಹಾಸಭಾ (ರಿ.)

ನಂ.17/4 'ವೀರಶೈವ-ಲಿಂಗಾಯತ ಭವನ', ಸದಾಶಿವನಗರ ಬೆಂಗಳೂರು-560080

## ದಿನಾಂಕ 07-1-2018 ರಂದು ನಡೆದ 43ನೇ ವಾರ್ಷಿಕ (2016-17ನೇ ಸಾಲಿನ) ಸರ್ವಸದಸ್ಯರ ಸಾಮಾನ್ಯ ಸಭೆಯ ನಡವಳಿಗಳು

ಮಹಾಸಭೆಯ ಅಧ್ಯಕ್ಷರಾದ ಡಾ. ಶಾಮನೂರು ಶಿವಶಂಕರಪ್ಪ, ಶಾಸಕರು, ಇವರ ಅಧ್ಯಕ್ಷತೆಯಲ್ಲಿ ದಿನಾಂಕ: 07-01-2018ರಂದು ಭಾನುವಾರ ಮಧ್ಯಾಹ್ನ 12-00 ಗಂಟೆಯಿಂದ 2.30 ಗಂಟೆಯವರೆಗೆ **'ತರಳಬಾಳು ಕೇಂದ್ರ ಸಭಾಂಗಣ', 3ನೇ ಮುಖ್ಯರಸ್ತೆ, 2ನೇ ಬ್ಲಾಕ್, ತರಳಬಾಳು ಮಾರ್ಗ, ಆರ್.ಟಿ.ನಗರ, ಬೆಂಗಳೂರು-560 032** ಇಲ್ಲಿ ನಡೆದ 43ನೇ ವಾರ್ಷಿಕ (2016-17ನೇ ಸಾಲಿನ) ಸರ್ವಸದಸ್ಯರ ಸಾಮಾನ್ಯ ಸಭೆಯ ನಡವಳಿಗಳು.

ಅಧ್ಯಕ್ಷರ ಅನುಮತಿಯ ಮೇರೆಗೆ ಕಾರ್ಯದರ್ಶಿಗಳಾದ ಶ್ರೀ ಹೆಚ್.ಎಂ.ರೇಣುಕಪ್ರಸನ್ನ ಇವರ ನಿರೂಪಣೆಯೊಂದಿಗೆ ಸಭೆಯು ಪ್ರಾರಂಭವಾಯಿತು. ಸಭೆಯಲ್ಲಿ ಒಟ್ಟು **613** ಸದಸ್ಯರು ಹಾಜರಿದ್ದರು.

ಮಹಾಸಭೆಯ ಉಪಾಧ್ಯಕ್ಷರುಗಳಾದ ಶ್ರೀ ದೇವರಾಯ ನಾಡೇಪಲ್ಲಿ, ಶ್ರೀಮತಿ ಮಧುರಾ ಅಶೋಕಕುಮಾರ, ಶ್ರೀಮತಿ ಗುರಮ್ಮಾ ಸಿದ್ದಾರೆಡ್ಡಿ, ಕಾರ್ಯದರ್ಶಿಗಳಾದ ಶ್ರೀಮತಿ ಸುವರ್ಣ ಚನ್ನಣ್ಣ ಹಾಗೂ ಸದಸ್ಯರಾದ ಮಲ್ಲೇಶಪ್ಪ ವಾಲಿ ಇವರುಗಳು ಸಭೆಗೆ ಗೈರುಹಾಜರಾಗುವ ಬಗ್ಗೆ ಅಧ್ಯಕ್ಷರಿಗೆ ದೂರವಾಣಿ/ಪತ್ರ ಮುಖೇನ ಅನುಮತಿಯನ್ನು ಕೋರಿರುತ್ತಾರೆ.

**ವಿಷಯ ನಂ 1 :- ಪ್ರಾರ್ಥನೆ**

ಶ್ರೀಮತಿ ಅರುಣಾ ಚಂದ್ರಶೇಖರ್ ಮತ್ತು ಶ್ರೀಮತಿ ರಶ್ಮಿ ರೇಣು ಇವರುಗಳು **'ನಾಡಗೀತೆ'** ಹಾಗೂ **'ಮಹಾಸಭಾ ಗೀತೆ'**ಗಳನ್ನು ಹಾಡುವುದರೊಂದಿಗೆ ಸಭೆಯ ನಡವಳಿಗಳನ್ನು ಆರಂಭಿಸಲಾಯಿತು.

**ವಿಷಯ ನಂ 2 :- ಸ್ವಾಗತ**

ಮಹಾಪ್ರಧಾನ ಕಾರ್ಯದರ್ಶಿಗಳಾದ **ಶ್ರೀ ಈಶ್ವರ ಖಂಡ್ರೆಯವರು** ಪ್ರಥಮವಾಗಿ ಅಖಿಲ ಭಾರತ ವೀರಶೈವ ಮಹಾಸಭೆಯ ಸಂಸ್ಥಾಪಕರಾದ ಪೂಜ್ಯಶ್ರೀ ಹಾನಗಲ್ಲ ಕುಮಾರ ಶಿವಯೋಗಿಗಳನ್ನು, ಶ್ರೀ ಜಗದ್ಗುರು ರೇಣುಕಾದಿ ಆಚಾರ್ಯರನ್ನು, ವಿಶ್ವಗುರು ಬಸವಣ್ಣನವರನ್ನು ಹಾಗೂ ಬಸವಾದಿ ಪ್ರಮಥರನ್ನು, ವೀರಶೈವ-ಲಿಂಗಾಯತ ಪರಂಪರೆಯ ಎಲ್ಲಾ ಶಿವಯೋಗಿಗಳು, ಸಂತ-ಮಹಾತ್ಮರು, ಮಠ-ಪೀಠಾಧೀಶರನ್ನು ಸಮಾಜವನ್ನು ಕಟ್ಟಿ ಬೆಳೆಸಿದ ಎಲ್ಲಾ ಪುಣ್ಯಪುರುಷರನ್ನು ಸ್ಮರಿಸುತ್ತಾ ಇಂದಿನ 43ನೇ ವಾರ್ಷಿಕ ಮಹಾಸಭೆಯಲ್ಲಿ ಭಾಗವಹಿಸಿರುವ ಎಲ್ಲಾ ಹಿರಿಯರಿಗೂ, ಸಮಾಜ ಬಂಧುಗಳಿಗೂ ಶರಣು ಶರಣಾರ್ಥಿ ಹೇಳುತ್ತಾ, ಇಂದಿನ ವಾರ್ಷಿಕ ಸರ್ವಸದಸ್ಯರ ಸಾಮಾನ್ಯ ಸಭೆಯ ಅಧ್ಯಕ್ಷತೆ ವಹಿಸಿರುವ ಮಹಾಸಭಾ ಅಧ್ಯಕ್ಷರಾದ ಡಾ.ಶಾಮನೂರು ಶಿವಶಂಕರಪ್ಪನವರು ಸಮಾಜದ ಏಳಿಗೆಗೆ ಹತ್ತಾರು ಯೋಜನೆಗಳನ್ನು ಹಾಕಿಕೊಂಡು ಸಮಾಜದ ಉನ್ನತಿಗಾಗಿ ಸದಾ ಶ್ರಮಿಸುತ್ತಿದ್ದಾರೆ. ಅವರಿಗೆ ಹೃತ್ಪೂರ್ವಕ ಸ್ವಾಗತ ಕೋರಿದರು.

ನಿಕಟಪೂರ್ವ ಅಧ್ಯಕ್ಷರಾದ ಡಾ. ಭೀಮಣ್ಣ ಖಂಡ್ರೆಯವರು ಎರಡು ಬಾರಿ ಅಧ್ಯಕ್ಷರಾಗಿ ಮಾಡಿರುವ ಸೇವೆ-ಸಾಧನೆ ತಮಗೆಲ್ಲಾ ಗೊತ್ತೇ ಇದೆ. ಅವರ ಕಾಲಾವಧಿಯಲ್ಲಿ ಅನೇಕ ಐತಿಹಾಸಿಕ ಕಾರ್ಯಗಳಾಗಿವೆ. **"ವೀರಶೈವ-ಲಿಂಗಾಯತ ಭವನ"** ನಿರ್ಮಾಣ, **"ಗುರು-ವಿರಕ್ತರ ಸಮಾವೇಶ"**, **"ಜನಗಣತಿ ಜಾಗೃತಿ ಜಾಥಾ"**, ಮಹಾಸಭೆಯ

ಸದಸ್ಯತ್ವ ಹೆಚ್ಚಳ, ಶಿವಯೋಗಮಂದಿರದಲ್ಲಿ ನಡೆದ ಮಹಾಸಭಾ ಹಾಗೂ ಶಿವಯೋಗ ಮಂದಿರ ಸಂಸ್ಥೆಗಳ **"ಶತಮಾನೋತ್ಸವ"**, ಬಸವಕಲ್ಯಾಣದಲ್ಲಿ ನಡೆದ **"ಹುತಾತ್ಮ ಶರಣ ಹರಳಯ್ಯ-ಮಧುವರಸರ ಸ್ಮರಣೋತ್ಸವ"**, ಸುತ್ತೂರಿನಲ್ಲಿ ನಡೆದ 22ನೇ **"ಮಹಾಅಧಿವೇಶನ"** ಹೀಗೆ ಹಲವಾರು ಐತಿಹಾಸಿಕ ಕಾರ್ಯಗಳಾಗಿವೆ. ತಮ್ಮ ಇಳಿವಯಸ್ಸಿನಲ್ಲಿ ಎಲ್ಲರಿಗೂ ಸ್ಫೂರ್ತಿ ನೀಡುತ್ತಾ ನಮ್ಮ ಮಧ್ಯದಲ್ಲಿರುತ್ತಾರೆ ಅವರಿಗೂ ಸ್ವಾಗತ ಕೋರಿದರು.

ಶ್ರೀ ಎನ್. ತಿಪ್ಪಣ್ಣನವರು ಸಮಾಜಕ್ಕಾಗಿಯೇ ಅರ್ಪಿಸಿಕೊಂಡ ಅಪರೂಪದ ವ್ಯಕ್ತಿ. ಮಹಾಸಭೆಯ ಹಿರಿಯ ಉಪಾಧ್ಯಕ್ಷರು ಹಾಗೂ ರಾಜ್ಯ ಘಟಕದ ಅಧ್ಯಕ್ಷರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಪ್ರಸ್ತುತ ಡಾ.ಶಾಮನೂರು ಶಿವಶಂಕರಪ್ಪನವರ ಜೊತೆಯಲ್ಲಿ ನಿಂತು ಮಹಾಸಭೆಯನ್ನು ಮುನ್ನಡೆಸುತ್ತಿದ್ದಾರೆ. ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಪ್ರವಾಸ ಮಾಡುತ್ತಿದ್ದಾರೆ. ಅವರಿಗೂ ಸ್ವಾಗತ ಬಯಸುತ್ತೇನೆ. ಹಿರಿಯರು, ಮುತ್ಸದ್ಧಿಗಳು, ಮಾರ್ಗದರ್ಶಕರು ಆದ ಡಾ. ಎಂ.ವಿ.ರಾಜಶೇಖರನ್‌ರವರು ಸಭೆಗೆ ಆಗಮಿಸಿದ್ದಾರೆ. ಅವರಿಗೂ ಹೃತ್ಪೂರ್ವಕ ಸ್ವಾಗತ ಬಯಸುತ್ತೇನೆ. ಮಹಾಸಭೆಯ ಎಲ್ಲಾ ಪದಾಧಿಕಾರಿಗಳಿಗೂ, ಕಾರ್ಯಕಾರಿ ಸಮಿತಿ ಸದಸ್ಯರಿಗೂ, ಸೆಂಟ್ರಲ್ ಕಮಿಟಿ ಸದಸ್ಯರಿಗೂ, ಕೇರಳ, ಮಹಾರಾಷ್ಟ್ರ, ಆಂಧ್ರಪ್ರದೇಶ, ತಮಿಳುನಾಡು ರಾಜ್ಯಗಳ ಅಧ್ಯಕ್ಷರು ಮತ್ತು ಪದಾಧಿಕಾರಿಗಳಿಗೂ, ಎಲ್ಲಾ ಜಿಲ್ಲಾ ಮತ್ತು ತಾಲ್ಲೂಕು ಘಟಕಗಳ ಅಧ್ಯಕ್ಷರು ಮತ್ತು ಪ್ರಧಾನ ಕಾರ್ಯದರ್ಶಿಗಳಿಗೂ ಹಾಗೂ ರಾಷ್ಟ್ರದ ಎಲ್ಲಾ ಭಾಗಗಳಿಂದ ಆಗಮಿಸಿರುವ ಸರ್ವಸದಸ್ಯರುಗಳಿಗೂ ಹೃತ್ಪೂರ್ವಕವಾಗಿ ಸ್ವಾಗತವನ್ನು ಕೋರಿದರು.

**ಪ್ರಾಸ್ತಾವಿಕ ನುಡಿ:-**

**ಆತ್ಮೀಯರೇ,**

ಇಂದು 43ನೇ ವಾರ್ಷಿಕ ಸರ್ವಸದಸ್ಯರ ಸಭೆಯಲ್ಲಿ ನಾವೆಲ್ಲಾ ಭಾಗವಹಿಸಿದ್ದೇವೆ. 1904ರಲ್ಲಿ ಪೂಜ್ಯ ಹಾನಗಲ್ ಕುಮಾರಶಿವಯೋಗಿಗಳು ಹರಿದು ಹಂಚಿ ಹೋಗಿದ್ದ ಸಮಾಜಕ್ಕೆ ಕಾಯಕಲ್ಪ ಮತ್ತು ದಿಕ್ಸೂಚಿಯನ್ನು ಕೊಟ್ಟು ಗುರಿ ಮತ್ತು ದ್ಯೇಯೋದ್ಧೇಶಗಳನ್ನು ಇಟ್ಟುಕೊಂಡು ಅಖಿಲ ಭಾರತ ವೀರಶೈವ ಮಹಾಸಭೆ ಮತ್ತು ಶಿವಯೋಗಮಂದಿರವನ್ನು ಸ್ಥಾಪನೆ ಮಾಡಿ, ಇವುಗಳ ಮುಖಾಂತರ ಪರಿವರ್ತನೆ ಮಾಡಿ, ನಮ್ಮ ಸಮಾಜದ ಏಕತೆ, ಸಮಗ್ರತೆ, ಅಖಂಡತೆ ಎಲ್ಲವನ್ನು ಮತ್ತು ಎಲ್ಲರನ್ನು ಒಗ್ಗೂಡಿಸಿ ಬಲಿಷ್ಠವಾದಂತ ಸಮಾಜ ನಿರ್ಮಾಣ ಮಾಡಬೇಕು ಎನ್ನುವ ಉದ್ದೇಶದಿಂದ ಇಂದು ನಾವು ಇತರೇ ಸಮಾಜದವರಿಗೂ ಮಾದರಿಯಾಗಿದ್ದೇವೆ. ಅಖಿಲ ಭಾರತ ವೀರಶೈವ ಮಹಾಸಭೆ ದೇಶದಲ್ಲೇ ಪುರಾತನವಾದ ಹಿರಿಯ ಸಂಸ್ಥೆಯಾಗಿದೆ. ಮಾನವ ಕುಲಕ್ಕೆ ಒಳ್ಳೆಯದಾಗಬೇಕು, ಧರ್ಮದಿಂದಲೇ ವಿಶ್ವಕ್ಕೆ ಶಾಂತಿ, ಮಾನವರೆಲ್ಲರೂ ಒಂದೇ ಎನ್ನುವ ವಿಚಾರ. 12ನೇ ಶತಮಾನದಲ್ಲಿ ಬಸವಾದಿ ಶರಣರು ಸಮಾಜೋಧಾರ್ಮಿಕ ಕ್ರಾಂತಿಯನ್ನು ಮಾಡಿದರು. ಸರ್ವರಿಗೂ ಲೇಸನ್ನೇ ಬಯಸಿದ ಸಮಾಜ, ಸರ್ವರಿಗೂ ಸಮಪಾಲು-ಸಮಬಾಳು ಅನ್ನುವ ರೀತಿಯಲ್ಲಿ ಈ ಸಮಾಜವನ್ನು ಕಟ್ಟಬೇಕು, ಬೆಳೆಸಬೇಕು. ಎಲ್ಲರನ್ನು ಒಂದೆಡೆ ಸೇರಿಸಬೇಕು ಎನ್ನುವ ಉದ್ದೇಶದಿಂದ-ದೂರದೃಷ್ಟಿಯಿಂದ ಈ ಸಂಸ್ಥೆಯನ್ನು ಸ್ಥಾಪಿಸಿದ್ದಾರೆ. ಕಾಯಕ ಮತ್ತು ದಾಸೋಹದ ಬುನಾದಿಯ ಮೇಲೆ ಅನೇಕ ಮಠಮಾನ್ಯಗಳು, ಸಂಘ-ಸಂಸ್ಥೆಗಳು ರಾಜ್ಯದಲ್ಲಿ ಬೇರೆ ಬೇರೆ ಕಡೆಗಳಲ್ಲಿ ವಿದ್ಯಾಸಂಸ್ಥೆಗಳನ್ನು ವಸತಿ ನಿಲಯಗಳನ್ನು ಪ್ರಾರಂಭಮಾಡಿ, ಲಕ್ಷಾಂತರ ಮಕ್ಕಳಿಗೆ ಜ್ಞಾನ ದಾಸೋಹ, ವಿದ್ಯಾದಾಸೋಹ, ಆಶ್ರಯ ಕೊಟ್ಟಿರುತ್ತಾರೆ. ಮಠಮಾನ್ಯಗಳು, ಶಿಕ್ಷಣ ಸಂಸ್ಥೆಗಳು ಒಳ್ಳೆಯ ಶಿಕ್ಷಣ ನೀಡಿರುವುದಕ್ಕಾಗಿ ಇಡೀ ಜಗತ್ತು ನಮ್ಮತ್ತ ನೋಡುತ್ತಿದೆ. ನಮ್ಮ ಸಮಾಜದವರು ಯಾರಿಗೂ ಕಡಿಮೆ ಇಲ್ಲ ಎಂದು ತೋರಿಸಿಕೊಟ್ಟಿದ್ದಾರೆ. ಇಸ್ರೋದ ಅಧ್ಯಕ್ಷರಾದ ಡಾ.ಎ.ಎಸ್.ಕಿರಣ್ ಕುಮಾರ್‌ರಂತಹವರು ಹಲವಾರು ಜನರಿದ್ದಾರೆ. ಬೆಂಗಳೂರು ಸಿಲಿಕಾನ್ ಸಿಟಿ ಎಂದು ಹೆಸರು ಪಡೆದಿದೆ ಎಂದು ಹೇಳುತ್ತಿದ್ದರೆ, ಇದಕ್ಕೆಲ್ಲಾ ಕಾರಣ ವೀರಶೈವ-ಲಿಂಗಾಯತ ಸಮಾಜ ಎಂದು ಹೇಳಬಹುದು. ಕೆ.ಎಲ್.ಇ.ಸೊಸೈಟಿ, ಬಿ.ಎಲ್.ಡಿ.ಇ. ಶಿಕ್ಷಣ ಸಂಸ್ಥೆ, ಬಸವೇಶ್ವರ ವಿದ್ಯಾವರ್ಧಕ

ಸಂಘ, ಬಾಪೂಜಿ ಶಿಕ್ಷಣ ಸಂಸ್ಥೆ, ಸಿದ್ಧಗಂಗಾ, ಸುತ್ತೂರು, ಚಿತ್ರದುರ್ಗ, ಸಿರಿಗೆರೆ, ಬಳ್ಳಾರಿ ವೀರಶೈವ ವಿದ್ಯಾವರ್ಧಕ ಸಂಘ ಹೀಗೆ ಅನೇಕ ಸಂಸ್ಥೆಗಳಿವೆ. ಅವರಿಗೆಲ್ಲಾ ನಾವು ಚಿರಋಣಿಗಳಾಗಿರಬೇಕು. ಈ ಸಮಾಜ ಕಟ್ಟಿದ ಪೂಜ್ಯ ಹಾನಗಲ್ ಕುಮಾರೇಶ್ವರರು ಇಲ್ಲದಿದ್ದರೆ ಸಮಾಜದ ಸ್ಥಿತಿ–ಗತಿ ಏನಾಗುತ್ತಿತ್ತು ನಾವೆಲ್ಲಾ ಆಲೋಚನೆ ಮಾಡಬೇಕಾಗಿದೆ. ಇಂದು ವಚನ ಸಾಹಿತ್ಯದ ಪರಿಷ್ಕರಣೆಯನ್ನು ಫ.ಗು.ಹಳಕಟ್ಟಿಯವರು ಮಾಡಿದ್ದಾರೆ ಎಂದರೆ ಅದಕ್ಕೆ ಎಲ್ಲಾ ರೀತಿಯ ಸಹಾಯ ಸಹಕಾರವನ್ನು ಹಾನಗಲ್ ಕುಮಾರೇಶ್ವರರು ನೀಡಿದ್ದಾರೆ.

ಇಂಥ ಪರಂಪರೆ ಇರುವ ಸಮಾಜ ಇವತ್ತು ಕವಲುದಾರಿಯಲ್ಲಿ ಹೋಗುತ್ತಿರುವುದು ಬಹಳ ದುರದೃಷ್ಟ ಸಂಗತಿ. ಮಹಾಸಭೆಯ ಸಂಕಲ್ಪ ವೀರಶೈವ–ಲಿಂಗಾಯತ ಒಂದೇ ಅನ್ನುವುದು ಇದರಲ್ಲಿ ಯಾವುದೇ ಭೇದ ಇಲ್ಲ. ವೀರಶೈವ ಲಿಂಗಾಯತ ಎರಡೂ ಒಂದೇ ಎಂದು ಹಲವಾರು ಬಾರಿ ಹೇಳಲಾಗಿದೆ. ಭಾರತ ಮತ್ತು ಇಂಡಿಯಾ ಎರಡೂ ಒಂದೇ ನಾಣ್ಯದ ಎರಡು ಮುಖಗಳು. ಹಾಗೆಯೇ ವೀರಶೈವ–ಲಿಂಗಾಯತ ಎರಡೂ ಸಮಾನಾಂತರ ಪದಗಳು ಇವೆರಡರಲ್ಲಿ ಯಾವುದೇ ಭಿನ್ನವಿಲ್ಲ. ವೀರಶೈವ–ಲಿಂಗಾಯತ ಒಂದೇ ಧರ್ಮ ಭಿನ್ನ ಧರ್ಮಗಳಲ್ಲ. ಇದನ್ನು ಬಹಳ ಸಲ ನಮ್ಮ ಎಲ್ಲಾ ಸಭೆಗಳಲ್ಲಿ ಹೇಳಲಾಗಿದೆ. ಶಿವನಲ್ಲಿ ನಿಷ್ಠೆ ಉಳ್ಳವರೇ ವೀರಶೈವ ಲಿಂಗವನ್ನು ಆಯತ ಮಾಡಿಕೊಂಡವರೇ ಲಿಂಗಾಯತರು. ವೀರಶೈವ ಪದ ಸಾಹಿತ್ಯಿಕವಾಗಿ ಹೆಚ್ಚಿನ ಬಳಕೆಯಲ್ಲಿದ್ದರೆ, ಲಿಂಗಾಯತ ರೂಡಿಯಲ್ಲಿ ಬಂದಿರುವಂತದ್ದು, ತಾತ್ವಿಕವಾಗಿಯೂ ಎರಡೂ ಒಂದೇ ಆಗಿದೆ. ಅಷ್ಟಾವರಣ, ಪಂಚಾಚಾರ, ಷಟಸ್ಥಲ ಎಲ್ಲರೂ ಒಪ್ಪಿಕೊಂಡಿದ್ದಾರೆ, ಅನುಸರಣೆ ಮಾಡುತ್ತಿದ್ದಾರೆ ಹಾಗೂ ತತ್ವಗಳೂ ಒಂದೇ ಆಗಿದೆ. ಪುರಾತನ ಕಾಲದಿಂದಲೂ ವೀರಶೈವ–ಲಿಂಗಾಯತ ಸಮಾನಾಂತರವಾಗಿ ಬೆಳೆದು ಬಂದಂತ ಧರ್ಮವಾಗಿದೆ. ಬಸವಾದಿ ಪ್ರಮಥರು ವೀರಶೈವ ಪದ ಸಾಕಷ್ಟು ಸಲ ಬಳಸಿದ್ದಾರೆ. ಸಾಹಿತಿಗಳು, ಸಂಶೋಧಕರು ಸಮಾಜದ ಹಿರಿಯರು ವೀರಶೈವ ಲಿಂಗಾಯತ ಒಂದೇ ಎಂದು ಹೇಳಿದ್ದಾರೆ, ಒಪ್ಪಿಕೊಂಡಿದ್ದಾರೆ. ಅಖಿಲ ಭಾರತ ವೀರಶೈವ ಮಹಾಸಭೆಯ 22 ಜನ ಅಧ್ಯಕ್ಷರುಗಳು ಹಾಗೂ ಈಗಿನ 23ನೇ ಅಧ್ಯಕ್ಷರಾದ ಶಾಮನೂರು ಶಿವಶಂಕರಪ್ಪನವರು ಇದೇ ವಿಚಾರವನ್ನು ಪ್ರತಿಪಾದಿಸಿದ್ದಾರೆ. ಇಂದು ಒಗ್ಗಟ್ಟಾಗುವ ಕಾಲವಾಗಿದೆ, ಆದರೆ ಒಡಕು ಬಂದಿರುವುದು ವಿಷಾದನೀಯವಾಗಿದೆ. ನಾವೆಲ್ಲಾ ಒಗ್ಗೂಡಿ ಸಮಾಜ ಒಪ್ಪುವಂತ ಕೆಲಸ ಮಾಡಬೇಕಾಗಿದೆ. ಅದಕ್ಕಾಗಿ ನಾವು ಯಾವುದೇ ವಿಷಯದ ಬಗ್ಗೆ ಟೀಕೆ ಟಿಪ್ಪಣಿ ಮಾಡಿಲ್ಲ. ಯಾವುದನ್ನು ಖಂಡಿಸದೇ ನಮ್ಮ ವಿಚಾರವನ್ನು ಪ್ರತಿಪಾದಿಸುತ್ತಿದ್ದೇವೆ. ಇಂದು ಮಹಾಸಭೆ 1 ಲಕ್ಷ ಸದಸ್ಯರನ್ನು ಹೊಂದಿದ್ದು, ಮುಂಬರುವ 5 ವರ್ಷಗಳಲ್ಲಿ 10 ಲಕ್ಷ ಸದಸ್ಯರನ್ನು ಮಾಡಬೇಕೆನ್ನುವ ಗುರಿ ಇದೆ. ಮಾನ್ಯ ಅಧ್ಯಕ್ಷರು ಕಾರ್ಯಕಾರಿ ಸಮಿತಿ ಸದಸ್ಯರು, ಜಿಲ್ಲಾ/ತಾಲ್ಲೂಕು ಅಧ್ಯಕ್ಷರನ್ನು ಒಳಗೊಂಡು ಅನೇಕ ಸಭೆಗಳನ್ನು ಮಾಡಿ ವೀರಶೈವ–ಲಿಂಗಾಯತ ಬೇರೆ ಬೇರೆಯಲ್ಲ ಒಂದೇ ಎಂದು ಹೇಳಲಾಗಿದೆ. ಇದು 40 ವರ್ಷಗಳ ಹೋರಾಟ ವೀರಶೈವ–ಲಿಂಗಾಯತ ಎರಡೂ ಒಂದೇ ಇದು ಪ್ರತ್ಯೇಕ ಸ್ವತಂತ್ರ ಧರ್ಮ ಎಂದು ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದ್ದೇವೆ ಹಾಗೂ ಇದನ್ನು ಅನೇಕ ಬಾರಿ ಪ್ರತಿಪಾದನೆ ಮಾಡಿದ್ದೇವೆ. ಮುಂದೆ ಕೂಡಾ ಒಗ್ಗೂಡಿ ಹೋರಾಟ ಮಾಡಬೇಕಾಗಿದೆ. ಆ ನಿಟ್ಟಿನಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ. ವೀರಶೈವ–ಲಿಂಗಾಯತ ಒಂದೇ ಎಂದು ಎಲ್ಲರಿಗೂ ಮನವರಿಕೆ ಮಾಡಿ ಎಲ್ಲರನ್ನು ಸೇರಿಸಿಕೊಂಡು ಹೋಗುವ ಪ್ರಯತ್ನ ಮುಂದುವರಿಯುತ್ತದೆ.

ಇನ್ನು ಅನೇಕ ವಿಚಾರಗಳಿವೆ. ಜಿಲ್ಲಾ ಮಟ್ಟದಲ್ಲಿ ವೀರಶೈವ–ಲಿಂಗಾಯತ ಭವನ ನಿರ್ಮಾಣ ಮಾಡುವಂತದ್ದು. ತರಬೇತಿ ಕೇಂದ್ರ, ಪ್ರತಿಭಾ ಪುರಸ್ಕಾರ ನೀಡುವಂತದ್ದು ಪ್ರತಿಭಾ ಪುರಸ್ಕಾರ ಕಳೆದ 5 ವರ್ಷಗಳಿಂದ ಮಾಡಲಾಗುತ್ತಿದೆ ಇದಕ್ಕಾಗಿ ಈ ಸಾರಿ 70 ಲಕ್ಷ ಮೀಸಲಿಟ್ಟಿದ್ದೇವೆ. ಅನೇಕ ಜಿಲ್ಲೆಗಳಲ್ಲಿ ನಿವೇಶನಗಳನ್ನು ಪಡೆಯುತ್ತಿದ್ದಾರೆ, ಕಟ್ಟಡಗಳೂ ನಡೆಯುತ್ತಿವೆ. ಎಲ್ಲಿ ಕಟ್ಟಡ ಕಟ್ಟುತ್ತಿದ್ದಾರೆ. ಆಯಾಯ ಜಿಲ್ಲಾ ಘಟಕಗಳಿಗೆ ಅವರುಗಳು ನೋಂದಾಯಿಸಿದ ಸದಸ್ಯತ್ವದಲ್ಲಿ ಶೇಕಡ 90ರಷ್ಟು ಮೊತ್ತವನ್ನು ಕೊಡಲಾಗುತ್ತಿದೆ. ಧಾರವಾಡದಲ್ಲಿ ಕಟ್ಟಡ ನಿರ್ಮಾಣವಾಗಿದೆ. ವಿಜಯಪುರ ಜಿಲ್ಲೆಯಲ್ಲಿ ಒಂದು ಸುಂದರವಾದ ಕಟ್ಟಡ ನಿರ್ಮಾಣವಾಗುತ್ತಿದೆ. ಹಾವೇರಿ ಜಿಲ್ಲೆಯಲ್ಲಿ ಕಟ್ಟಡ ನಿರ್ಮಾಣ ಪ್ರಾರಂಭವಾಗಿದೆ. ಇನ್ನೂ

ಹೆಚ್ಚಿನ ಕಾರ್ಯಕ್ರಮಗಳನ್ನು ಹಾಕಿಕೊಳ್ಳುವ ಅವಶ್ಯಕತೆ ಇದೆ. ಹಾಗೆಯೇ ಬೆಂಗಳೂರಿನಲ್ಲಿ ಒಂದು ಕಟ್ಟಡ ಕಟ್ಟಬೇಕಾಗಿದೆ. ನಿಕಟಪೂರ್ವ ಅಧ್ಯಕ್ಷರಾದ ಡಾ.ಭೀಮಣ್ಣ ಖಂಡ್ರೆಯವರು, ಅಧ್ಯಕ್ಷರಾದ ಡಾ.ಶಾಮನೂರು ಶಿವಶಂಕರಪ್ಪನವರು, ಹಿರಿಯ ಉಪಾಧ್ಯಕ್ಷರಾದ ಶ್ರೀ ಎನ್.ತಿಪ್ಪಣ್ಣನವರ ಮಾರ್ಗದರ್ಶನದಂತೆ ಅದು ಕಾರ್ಯಗತವಾಗುತ್ತಿದೆ. ಡಾ.ಶಾಮನೂರು ಶಿವಶಂಕರಪ್ಪನವರ ಪ್ರಯತ್ನದಿಂದ ಶ್ರೀ ಜಿತು ವಿರ್ವಾನಿಯವರು ತರಹುಣಿಸೆ ಗ್ರಾಮದಲ್ಲಿ 2 ಎಕರೆ ಜಮೀನನ್ನು ದಾನ ನೀಡಿರುತ್ತಾರೆ. ಮಹಾಸಭೆಯಿಂದ ಸರ್ಕಾರಕ್ಕೆ ಜಮೀನು ಕೇಳಿ ಪ್ರಸ್ತಾವನೆ ಸಲ್ಲಿಸಲಾಗಿತ್ತು, ಪ್ರಯುಕ್ತ 2 ಎಕರೆ ಜಮೀನನ್ನು ದಾಸನಪುರ ಹೋಬಳಿ, ಮಾಚೋಹಳ್ಳಿ ಗ್ರಾಮದ ಬಳಿ 2 ಎಕರೆ ಜಮೀನನ್ನು 30 ವರ್ಷಗಳ ಗುತ್ತಿಗೆ ಆಧಾರದ ಮೇಲೆ ಮಂಜೂರು ಮಾಡಲಾಗಿದೆ. ಇಲ್ಲಿ ಒಂದು ಸಾವಿರ ವಿದ್ಯಾರ್ಥಿ/ವಿದ್ಯಾರ್ಥಿನಿಯರಿಗೆ ಹಾಸ್ಟೆಲ್ ನಿರ್ಮಾಣ ಮಾಡಲು ಕ್ರಮ ಜರುಗಿಸಲಾಗುವುದು. ಇಂದಿನ ವಾರ್ಷಿಕ ಸಭೆಯಲ್ಲಿ ಕಾರ್ಯಸೂಚಿ ಪ್ರಕಾರ ವಿಷಯ ಮಂಡನೆ ಮತ್ತು ಚರ್ಚೆಯಾಗಬೇಕಾಗಿದೆ. ಕಾರ್ಯಸೂಚಿ ನಂತರ ಅಧ್ಯಕ್ಷರ ಅಪ್ಪಣೆ ಮೇರೆಗೆ ಇತರೇ ವಿಷಯಗಳನ್ನು ಚರ್ಚೆ ಮಾಡಬೇಕಾಗಿದೆ. ಎಲ್ಲರಿಗೂ ಮತ್ತೊಮ್ಮೆ ಸ್ವಾಗತವನ್ನು ಬಯಸಿ, ಹೊಸ ವರ್ಷದ ಶುಭಾಷಯಗಳನ್ನು ಹಾಗೂ ಸಂಕ್ರಮಣ ಹಬ್ಬದ ಶುಭಾಷಯಗಳನ್ನು ಕೋರಿದರು.

**ಉದ್ಘಾಟನೆ:–**

2016–17ನೇ ಸಾಲಿನ ವಾರ್ಷಿಕ ಸರ್ವಸದಸ್ಯರ ಸಾಮಾನ್ಯ ಸಭೆಯನ್ನು ಅಧ್ಯಕ್ಷರಾದ ಡಾ. ಶಾಮನೂರು ಶಿವಶಂಕರಪ್ಪನವರು, ಹಿರಿಯ ಉಪಾಧ್ಯಕ್ಷರಾದ ಶ್ರೀ ಎನ್.ತಿಪ್ಪಣ್ಣನವರು ಹಾಗೂ ನಿಕಟಪೂರ್ವ ಅಧ್ಯಕ್ಷರಾದ ಡಾ.ಭೀಮಣ್ಣ ಖಂಡ್ರೆಯವರು ಹಾಗೂ ವೇದಿಕೆಯಲ್ಲಿದ್ದ ಎಲ್ಲಾ ಪದಾಧಿಕಾರಿಗಳು ದೀಪ ಬೆಳಗಿಸುವುದರ ಮೂಲಕ ಸಭೆಯ ಉದ್ಘಾಟನೆಯನ್ನು ನೆರವೇರಿಸಿದರು.

**ವಿಷಯ ನಂ 3 :– ಶ್ರದ್ಧಾಂಜಲಿ.**

2016–17ನೇ ಸಾಲಿನಲ್ಲಿ ಲಿಂಗೈಕ್ಯರಾದ ಪೂಜ್ಯರುಗಳು, ಸಮಾಜದ ಗಣ್ಯರು, ಮಹಾಸಭೆಯ ಸದಸ್ಯರುಗಳು ಹಾಗೂ ಸಮಾಜದ ಸರ್ವ ಸದಸ್ಯರುಗಳ ಹೆಸರುಗಳನ್ನು ಮಹಾಸಭೆಯ ಉಪಾಧ್ಯಕ್ಷರಾದ ಶ್ರೀ ಬಿ.ಎಸ್.ಸಚ್ಚಿದಾನಂದಮೂರ್ತಿಯವರು ಸಭೆಯಲ್ಲಿ ಓದಿದರು.

| ಕ್ರಸಂ | ಲಿಂಗೈಕ್ಯರಾದ ಪೂಜ್ಯರು ಶರಣ/ಶರಣೆಯರ ಹೆಸರುಗಳು | ಸ್ಥಳ |
|---|---|---|
| 1. | **ಮುಮ್ಮಡಿ ಮಹಾಲಿಂಗ ಸ್ವಾಮೀಜಿ**<br>ದೇಗುಲಮಠ, ಕನಕಪುರ | ರಾಮನಗರ |
| 2. | **ಪೂಜ್ಯಶ್ರೀ ಮಹಾಂತ ಸ್ವಾಮೀಜಿ**<br>ಮುರುಘರಾಜೇಂದ್ರ ಸ್ವಾಮಿ ಮಠ | ಚಾಮರಾಜನಗರ |
| 3 | **ಪೂಜ್ಯಶ್ರೀ ಮೃತ್ಯುಂಜಯ ಸ್ವಾಮಿಗಳು**<br>ಗವಿಮಠ, | ಬಾಗಲಕೋಟೆ |
| 4. | **ವಿದ್ವಾನ್ ಶ್ರೀ ಇಮ್ಮಡಿ ಶಿವಬಸವ ಸ್ವಾಮಿಗಳು**<br>ಕುಂದೂರು ಮಠ, | ಮೈಸೂರು |
| | | |

| ಕ್ರ.ಸಂ | ಲಿಂಗೈಕ್ಯರಾದ ಪೂಜ್ಯರು ಶರಣ/ಶರಣೆಯರ ಹೆಸರುಗಳು | ಸ್ಥಳ |
|---|---|---|
| 5. | **ಹೆಚ್.ಎಸ್.ಮಹದೇವಪ್ರಸಾದ್‌ರವರು**<br>ಸಚಿವರು ಹಾಗೂ ದಾನಿಗಳು | ಚಾಮರಾಜನಗರ ಜಿಲ್ಲೆ |
| 6. | **ಲಿಂಗನಗೌಡ ಮಲಹಾರ್ ಕಾರಡ್ಡಿ,**<br>ಉಪಾಧ್ಯಕ್ಷರು, ಅ.ಭಾ.ವೀ.ಮಹಾಸಭಾ ವೀರಶೈವ–ಲಿಂಗಾಯತ ಭವನದ ಕಟ್ಟಡ ನಿಧಿಗೆ 5 ಲಕ್ಷ ನೀಡಿರುತ್ತಾರೆ. | ಯಾದಗಿರಿ |
| 7. | **ಎಸ್.ಬಿ.ಸಂಕಣ್ಣನವರು**<br>ಅಧ್ಯಕ್ಷರು, ಗದಗ ಜಿಲ್ಲಾ ಘಟಕ ಹಾಗೂ ಮಹಾದಾನಿಗಳು | ಗದಗ |
| 8. | **ಎಂ.ವಿ.ಕೀರ್ತಿಹಾಸನ್‌ರವರು**<br>ಸಮಾಜದ ಮುಖಂಡರು | ಬೆಂಗಳೂರು |
| 9. | **ನಂಜಪ್ಪ ಮಾಸ್ಟರ್,**<br>ಶಿಕ್ಷಕರು, | ಬೆಂಗಳೂರು |
| 10. | **ಜೆ.ಪಿ.ನಾರಾಯಣಸ್ವಾಮಿಯವರು**<br>ವೀರಶೈವ–ಲಿಂಗಾಯತ ಭವನದ ಕಟ್ಟಡ ನಿಧಿಗೆ 5 ಲಕ್ಷ ನೀಡಿರುತ್ತಾರೆ. ಚೇರ್ಮನ್, ಮೆ॥ ಜೆ.ಪಿ.ಡಿಸ್ಟಿಲರೀಸ್ | ಬೆಂಗಳೂರು |
| 11. | **ಎನ್.ಅಯ್ಯಣ್ಣ**<br>ಬಳ್ಳಾರಿ | ಬಳ್ಳಾರಿ |
| 12. | **ವಿಜಯ ರಾಘವನ್**<br>ಚಲನಚಿತ್ರ ನಟ | ಕೇರಳ |
| 13. | **ಮಲ್ಲಮ್ಮ ಮಲ್ಲಿಕಾರ್ಜುನ ಬಂಡೆ**<br>ಪೋಲಿಸ್ ಅಧಿಕಾರಿ ಮಲ್ಲಕಾರ್ಜುನ ಬಂಡೆಯವರ ಧರ್ಮಪತ್ನಿ | ಕಲಬುರಗಿ |
| 14. | **ಎನ್.ಹರೀಶ್**<br>ಪೋಲಿಸ್ ಕಮಿಷನರ್, ಚನ್ನೈ ಜಾಗೃತ ಮತ್ತು ಭ್ರಷ್ಟಾಚಾರ ನಿಗ್ರಹ ದಳ | ಕೋಲಾರ |
| 15. | **ಆರ್.ಎಂ.ಕಲೂತಿ**<br>ಮಾಜಿ ಸಚಿವರು | ಬಾಗಲಕೋಟೆ |
| 16. | **ವೀರೇಂದ್ರ ಸಿಂಪಿ**<br>ಖ್ಯಾತ ಸಾಹಿತಿ | ಬೀದರ್ |
| 17. | **ಪ್ರೊ.ಬಸವರಾಜ್ ಪುರಾಣಿಕ**<br>ಖ್ಯಾತ ಸಾಹಿತಿ | ಬಾಗಲಕೋಟೆ |

| ಕ್ರ.ಸಂ | ಲಿಂಗೈಕ್ಯರಾದ ಪೂಜ್ಯರು ಶರಣ/ಶರಣೆಯರ ಹೆಸರುಗಳು | ಸ್ಥಳ |
|---|---|---|
| **18.** | **ಎಸ್.ಎಸ್.ಪಾಟೀಲ್**<br>ಮಾಜಿ ಶಾಸಕರು | ಬಾಗಲಕೋಟೆ |
| **19.** | **ರುದ್ರಾಣಿ ಶಿವರುದ್ರಪ್ಪ**<br>ರಾಷ್ಟ್ರಕವಿ ಡಾ.ಜಿ.ಎಸ್.ಶಿವರುದ್ರಪ್ಪನವರ ಧರ್ಮಪತ್ನಿ | ಬೆಂಗಳೂರು |
| **20.** | **ವೀರಭದ್ರಪ್ಪ**<br>ಸಮಾಜ ಮುಖಂಡರು | ಬಂಡಳ್ಳಿ,<br>ಚಾಮರಾಜನಗರ ಜಿಲ್ಲೆ |
| 21. | **ಬಸವರಾಜಪ್ಪ**<br>ಸಮಾಜದ ಪ್ರಮುಖರು | ತಾವರೆಕೆರೆ<br>ಬೆಂಗಳೂರು |
| 22. | **ಜಗದೇವಿ ಚೆನ್ನಶೆಟ್ಟಿ**<br>ಜಿಲ್ಲಾಧ್ಯಕ್ಷರಾದ ವೈಜನಾಥ ಕಮಠಾಣೆಯವರ ಮಗಳು | ಬೀದರ್ |
| 23. | **ನಾಗೇಶ್ ದುಮ್ಮಿ**<br>ಸೆಂಟ್ರಲ್ ಕಮಿಟಿ ಸದಸ್ಯರು | ಬೆಂಗಳೂರು |
| 24. | **ಟಿ.ಬಿ.ಚಿದಾನಂದಸ್ವಾಮಿ**<br>ಸದಸ್ಯರು | ತಾವರೆಕೆರೆ<br>ಬೆಂಗಳೂರು |
| 25. | **ಶಿವಪ್ಪ ಮಲ್ಲಪ್ಪ ಸಜ್ಜನ**<br>ಸಮಾಜದ ಮುಖಂಡರು | ಬಾಗಲಕೋಟೆ |
| 26. | **ವಿರುಪಾಕ್ಷಪ್ಪ ನಾಗಠಾಣ**<br>ಸಮಾಜದ ಮುಖಂಡರು | ಬಾಗಲಕೋಟೆ |
| 27. | **ಚಂದ್ರಶೇಖರ ಪಿ.ಹೊನ್ಯಾಳ**<br>ಸಮಾಜದ ಮುಖಂಡರು | ಬಾಗಲಕೋಟೆ |
| 28. | **ಬಸವರಾಜ ಕಂಠೆಪ್ಪ ನಾವಲಗಿ**<br>ಸಮಾಜದ ಮುಖಂಡರು | ಬಾಗಲಕೋಟೆ |
| 29. | **ವಿರುಪಾಕ್ಷಪ್ಪ ಶಿರಗನ್ನವರ**<br>ಸಮಾಜದ ಮುಖಂಡರು | ಬಾಗಲಕೋಟೆ |
| 30. | **ಲಚ್ಚಪ್ಪ ಕೂಡ್ಲೆಪ್ಪ ಬಾಗೇವಾಡಿ**<br>ಸಮಾಜದ ಮುಖಂಡರು | ಬಾಗಲಕೋಟೆ |
| 31. | **ರುದ್ರಪ್ಪ ನಾಗಪ್ಪ ಕಲ್ಯಾಣಿ**<br>ಸಮಾಜದ ಮುಖಂಡರು | ಬಾಗಲಕೋಟೆ |

| ಕ್ರ.ಸಂ | ಲಿಂಗೈಕ್ಯರಾದ ಪೂಜ್ಯರು ಶರಣ/ಶರಣೆಯರ ಹೆಸರುಗಳು | ಸ್ಥಳ |
|---|---|---|
| 32. | **ಹುಚ್ಚಪ್ಪ ಸಿದ್ದಪ್ಪ ಹುಲ್ಯಾಣ**<br>ಸಮಾಜದ ಮುಖಂಡರು | ಬಾಗಲಕೋಟೆ |
| 33. | **ಸಂಗಪ್ಪ ಶಿವಲಿಂಗಪ್ಪ ನಾವಲಗಿ**<br>ಸಮಾಜದ ಮುಖಂಡರು | ಬಾಗಲಕೋಟೆ |
| 34. | **ಬಸಪ್ಪ ಚನ್ನಪ್ಪ ತೋಟದ**<br>ಸಮಾಜದ ಮುಖಂಡರು | ಬಾಗಲಕೋಟೆ |
| 35. | **ವಿಶ್ವನಾಥ ಸಂಗಪ್ಪ ಪಲ್ಲೇದ**<br>ಸಮಾಜದ ಮುಖಂಡರು | ಬಾಗಲಕೋಟೆ |
| 36. | **ಸಿದ್ರಾಮಪ್ಪ ಬಸಪ್ಪ ತಾಳಿಕೋಟಿ**<br>ಸಮಾಜದ ಮುಖಂಡರು | ಬಾಗಲಕೋಟೆ |
| 37. | **ಬಸವರಾಜ ಹನುಮಂತರಾವ ಸಾಸನೂರು**<br>ಸಮಾಜದ ಮುಖಂಡರು | ಬಾಗಲಕೋಟೆ |
| 38. | **ಸಂಗಪ್ಪ ಬಸಪ್ಪ ರುದ್ರಾಕ್ಷಿ**<br>ಸಮಾಜದ ಮುಖಂಡರು | ಬಾಗಲಕೋಟೆ |
| 39. | **ವಿರುಪಾಕ್ಷಪ್ಪ ಮಾಗುಂಡಪ್ಪ ಚೊಳಚಗುಡ್ಡ**<br>ಸಮಾಜದ ಮುಖಂಡರು | ಬಾಗಲಕೋಟೆ |
| 40. | **ಶ್ರೀಶೈಲಪ್ಪ ಬಸಪ್ಪ ಅರಕೇರಿ**<br>ಸಮಾಜದ ಮುಖಂಡರು | ಬಾಗಲಕೋಟೆ |
| 41. | **ಕುಮಾರ ದೇವರು**<br>ಸಮಾಜದ ಮುಖಂಡರು | ಬಾಗಲಕೋಟೆ |
| 42. | **ಶಿವಯೋಗೆಪ್ಪ ಸಿದ್ದಪ್ಪ ವಿಜಾಪುರ**<br>ಸಮಾಜದ ಮುಖಂಡರು | ಬಾಗಲಕೋಟೆ |
| 43. | **ಸಾಬಣ್ಣ ಹುಲಿಗೆಪ್ಪ ಕೆಂಚಣ್ಣವರ**<br>ಸಮಾಜದ ಮುಖಂಡರು | ಬಾಗಲಕೋಟೆ |
| 44. | **ಬಸವರಾಜ ಸಿದ್ರಾಮಪ್ಪ ಬೂದಿಹಾಳ**<br>ಸಮಾಜದ ಮುಖಂಡರು | ಬಾಗಲಕೋಟೆ |
| 45. | **ಗುರುಪಾದಪ್ಪ ಭೀಮಪ್ಪ ಸಜ್ಜನ**<br>ಸಮಾಜದ ಮುಖಂಡರು | ಬಾಗಲಕೋಟೆ |

| | | |
|---|---|---|
| 46. | **ಚಂದ್ರಶೇಖರ ರಾಚಪ್ಪ ಬಾಗೇವಾಡಿ**<br>ಸಮಾಜದ ಮುಖಂಡರು | ಬಾಗಲಕೋಟೆ |
| 47. | **ಸಂಗಪ್ಪ ತಾಳಿಕೋಟೆ**<br>ಸಮಾಜದ ಮುಖಂಡರು | ಬಾಗಲಕೋಟೆ |
| 48. | **ರಾಮಣ್ಣ ಶೇಖರಪ್ಪ ಅಕ್ಕಿಮರಡಿ**<br>ಸಮಾಜದ ಮುಖಂಡರು | ಬಾಗಲಕೋಟೆ |
| 49. | **ಶಕುಂತಲಾ ಅಂದಾನೆಪ್ಪ ವಾಲಿ**<br>ಸಮಾಜದ ಮುಖಂಡರು | ಬಾಗಲಕೋಟೆ |
| 50. | **ವಾಸಣ್ಣ ದೇಸಾಯಿ**<br>ಸಮಾಜದ ಮುಖಂಡರು | ಬಾಗಲಕೋಟೆ |
| 51. | **ಪಾರ್ವತಮ್ಮ ತೊ.ಗುಂದೂರ**<br>ಸದಸ್ಯರಾದ ಶ್ರೀ ಸಂಗಣ್ಣ ದುಂದೂರ ಇವರ ತಾಯಿ | ಗದಗ |
| 52. | **ಫಕ್ಕೀರಪ್ಪ ಗಡ್ಡಿ**<br>ಸದಸ್ಯರು | ಗದಗ |
| 53 | **ಜಿ.ಸಿ.ಮಲ್ಲಪ್ಪ**<br>ಸದಸ್ಯರು | ಬಂಗಾರಪೇಟೆ<br>ಕೋಲಾರ ಜಿಲ್ಲೆ |
| 54. | **ಜಿ.ಪಿ.ಶಿವಕುಮಾರ್**<br>ಸದಸ್ಯರು | ಬಂಗಾರಪೇಟೆ<br>ಕೋಲಾರ ಜಿಲ್ಲೆ |
| 55. | **ಬಿ.ಆರ್.ಪರಮೇಶ್ವರಯ್ಯ**<br>ಸದಸ್ಯರು | ಬಂಗಾರಪೇಟೆ<br>ಕೋಲಾರ ಜಿಲ್ಲೆ |
| 56. | **ವೈ.ಪಿ.ಮಹದೇವಪ್ಪ**<br>ಸದಸ್ಯರು | ಯಾಲೇಹಳ್ಳಿ, ತಾ॥ ನಂಜನಗೂಡು<br>ಮೈಸೂರು ಜಿಲ್ಲೆ |
| 57. | **ಪಿ.ಸಿ.ಸದಾಶಿವಪ್ಪ**<br>ಅಧ್ಯಕ್ಷರು, ಪಿರಿಯಾಪಟ್ಟಣ ತಾ॥ ಘಟಕ | ಪಿರಿಯಾಪಟ್ಟಣ<br>ಮೈಸೂರು ಜಿಲ್ಲೆ |
| 58. | **ಉಳವವ್ವಾ ಶೀಲವಂತ**<br>ಸದಸ್ಯರು | ಬೆಳಗಾವಿ |
| 60. | **ಶಿವದೇವಿ ಆರ್.ಕರಡಿಗುದ್ದಿ**<br>ಸದಸ್ಯರು | ಬೆಳಗಾವಿ |
| 61. | **ಜಯಶ್ರೀ ಗುರುಬಸಪ್ಪ ಚೊಣ್ಣದ**<br>ಸದಸ್ಯರು | ಬೆಳಗಾವಿ |

| | | |
|---|---|---|
| 62. | **ಲೀಲಾವತಿ ಖರಾಬೆ**<br>ಸದಸ್ಯರು | ಬೆಳಗಾವಿ |
| 63. | **ಪ್ರಭು ಸುಬೇದಾರ್**<br>ಸದಸ್ಯರು | ಹುಕ್ಕೇರಿ ಜಿಲ್ಲಾ<br>ಬೆಳಗಾವಿ |
| 64. | **ಬಿ.ಬಿ.ಶಿವಪ್ಪ**<br>ಮಾಜಿ ಸಚಿವರು | ಹಾಸನ |
| 65. | **ಸೋಮಶೆಟ್ಟಿ**<br>ಸದಸ್ಯರು | ಹಾವೇರಿ |
| 66. | **ಪಿ.ನಾಗಭೂಷಣ್**<br>ಸದಸ್ಯರು | |
| 67. | **ಚನ್ನಶೆಟ್ಟಿ**<br>ಸದಸ್ಯರು | ಧಾರವಾಡ |
| 68. | **ಗೌರಿ ಲಂಕೇಶ್**<br>ಪತ್ರಕರ್ತರು | ಬೆಂಗಳೂರು |
| 69. | **ಚನ್ನಬಸಪ್ಪ**<br>ಸದಸ್ಯರು | |
| 70 | **ಮಲ್ಲಣಗೌಡ ಮಾಲಿ ಪಾಟೀಲ್**<br>ಸದಸ್ಯರು | ಯಾದಗಿರಿ |
| 71 | **N.C.Rajendran**<br>Member | Kerala |

ಇವರುಗಳು ಲಿಂಗೈಕ್ಯರಾಗಿದ್ದು, ಇವರಷ್ಟೆ ಅಲ್ಲದೇ ಇನ್ನೂ ಹಲವಾರು ಸಮಾಜ ಬಂಧುಗಳು ಲಿಂಗೈಕ್ಯರಾಗಿರುತ್ತಾರೆ. ಇವರುಗಳ ನಿಧನದಿಂದ ಅವರುಗಳ ಕುಟುಂಬವರ್ಗಕ್ಕೆ ಹಾಗೂ ಸಮಾಜಕ್ಕೆ ತುಂಬಲಾರದ ನಷ್ಟವಾಗಿದೆ. ಇವರ ಅಗಲುವಿಕೆಯನ್ನು ಸಹಿಸಿಕೊಳ್ಳುವ ಶಕ್ತಿಯನ್ನು ಹಾಗೂ ಅವರ ಆತ್ಮಕ್ಕೆ ಚಿರಶಾಂತಿಯನ್ನು ನೀಡಲೆಂದು ಭಗವಂತನಲ್ಲಿ ಪ್ರಾರ್ಥಿಸಿ, 2 ನಿಮಿಷ ಮೌನವಾಚರಿಸಿ ಶ್ರದ್ಧಾಂಜಲಿಯನ್ನು ಸಲ್ಲಿಸಲಾಯಿತು.

**ವಿಷಯ ನಂ 4 :– ಸಭೆಯ ತಿಳುವಳಿಕೆ ಪತ್ರ ಓದಿ ದಾಖಲಿಸುವುದು.**

ಮಹಾಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಈಶ್ವರ್ ಖಂಡ್ರೆಯವರು ಸಭೆಯ ತಿಳುವಳಿಕೆ ಪತ್ರವನ್ನು ಓದಿದ ನಂತರ ದಾಖಲಿಸಲು ಅನುಮತಿ ಕೋರಿದರು.

**ನಿರ್ಣಯ:–**

**ಸಭೆಯ ತಿಳುವಳಿಕೆ ಪತ್ರ ಓದಿ ಯಾವುದೇ ಬದಲಾವಣೆ ಇಲ್ಲದೆ ದಾಖಲಿಸಲಾಯಿತು.**

**ಸೂಚಕರು :– ಶ್ರೀ ಬಸವರಾಜ್ ದಿಂಡೂರು, ಬೆಂಗಳೂರು**

**ಅನುಮೋದಕರು :– ಶ್ರೀ ಎನ್.ಕೇಶವಕುಮಾರ್, ಬೆಂಗಳೂರು**

**ವಿಷಯ ನಂ 5 :– ದಿನಾಂಕ: 25–12–2016ರಂದು ನಡೆದ ಹಿಂದಿನ ಸರ್ವಸದಸ್ಯರ ಸಾಮಾನ್ಯ ಸಭೆಯ ನಡವಳಿಕೆಗಳನ್ನು ಓದಿ ದೃಢೀಕರಿಸುವುದು.**

ಮಹಾಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಈಶ್ವರ್ ಖಂಡ್ರೆ ಇವರು ಈ ವಿಷಯವನ್ನು ಮಂಡಿಸಿ, ಸದಸ್ಯರಿಗೆ ಕೊಟ್ಟಿರುವ 43ನೇ ವಾರ್ಷಿಕ ಸಭೆಯ ವರದಿಯ ಪುಸ್ತಕದ ಪುಟ ನಂ. 3 ರಿಂದ 33ರವರೆಗೆ ದಿನಾಂಕ: 25–12–2016ರಂದು ನಡೆದ ಹಿಂದಿನ ಸರ್ವಸದಸ್ಯರ ಸಾಮಾನ್ಯ ಸಭೆಯ ನಡವಳಿಗಳನ್ನು ಮುದ್ರಿಸಿದೆ. ಇದರಲ್ಲಿ ಏನಾದರೂ ಸಲಹೆ–ಸೂಚನೆಗಳಿದ್ದರೆ ತಿಳಿಸಬಹುದು. ಏನೂ ಸಲಹೆ–ಸೂಚನೆಗಳು ಇಲ್ಲದಿದ್ದಲ್ಲಿ ನಡವಳಿಗಳನ್ನು ಮಾನ್ಯ ಸದಸ್ಯರು ದೃಢೀಕರಿಸಬೇಕೆಂದು ಕೋರಿದರು.

ಸದಸ್ಯರಾದ ಶ್ರೀ ಬಸವರಾಜ್ ದಿಂಡೂರುರವರು ಮಾತನಾಡಿ, ಹಿಂದಿನ ಸಭೆಯಲ್ಲಿ ನಾನು ಜಾತಿ ಜನಗಣತಿ ಬಗ್ಗೆ ಮಾತನಾಡಿದ್ದೆ ಅದು ನಡವಳಿಯಲ್ಲಿ ಬಿಟ್ಟುಹೋಗಿರುತ್ತದೆ ಎಂದರು. ವರದಿಯ ಪುಟ ಸಂಖ್ಯೆ 15ರಲ್ಲಿ ತಾವು ಮಾತನಾಡಿರುವುದು ಮುದ್ರಿಸಲಾಗಿದೆ ಎಂದು ಮಹಾಪ್ರಧಾನ ಕಾರ್ಯದರ್ಶಿಗಳು ತಿಳಿಸಿದರು.

ಸದಸ್ಯರಾದ ಶ್ರೀ ಸದಾನಂದ ಶಿವಳ್ಳಿಯವರು ಮಾತನಾಡಿ, ವರದಿಯ ಪುಟ ಸಂಖ್ಯೆ 23 ಮತ್ತು 24 ರಲ್ಲಿ ಶ್ರೀ ಶಿವಣ್ಣ ಬೆಲ್ಲದ ಮತ್ತು ನಾನು ಬರೆದ ಪತ್ರದಲ್ಲಿ ಅಂದಿನ ಸಭೆಯಲ್ಲಿ ಉತ್ತರವನ್ನು ಬೇರೆ ನೀಡಲಾಗಿತ್ತು. ಆದರೆ ವರದಿಯಲ್ಲಿ ಬೇರೆ ಹಾಕಲಾಗಿದೆ ಎಂದರು. ಸಂವಿಧಾನದಲ್ಲಿ ಇಲ್ಲದೇ ಇದ್ದರೂ ಸಹ ಸದಸ್ಯತ್ವ ಕೊಡಲಾಗಿತ್ತು. ಕಾರ್ಯಕಾರಿ ಸಮಿತಿಯಲ್ಲಿ ಸದಸ್ಯತ್ವವನ್ನು ಮಂಜೂರು ಮಾಡಲು ಮುಖ್ಯ ಉದ್ದೇಶ ಧಾರವಾಡದಲ್ಲಿ ಒಂದು ಒಳ್ಳೆಯ ಕಟ್ಟಡ ಆಗಿದೆ. 1 ಲಕ್ಷ ಮೇಲ್ಪಟ್ಟು ದೇಣಿಗೆ ನೀಡಿದ 43 ಜನ ಸದಸ್ಯರಿಗೆ ಸದಸ್ಯತ್ವ ಕೊಡಲು ನಿರ್ಣಯಿಸಲಾಗಿತ್ತು. ಇದೇ ಆಧಾರವಿಟ್ಟುಕೊಂಡು ಬೇರೆ ಬೇರೆ ಪ್ರಸ್ತಾವನೆಗಳು ಬಂದವು. ಕೆಲವರು ಈ ವಿಷಯದಲ್ಲಿ ಕೋರ್ಟ್‌ಗೆ ಹೋದ ಸಂದರ್ಭದಲ್ಲಿ ಮಾನ್ಯ ಅಧ್ಯಕ್ಷರು ಅಸಂವಿಧಾನಾತ್ಮಕವಾಗಿ ಕೊಟ್ಟ ಸದಸ್ಯತ್ವವನ್ನು ರದ್ದು ಮಾಡಬೇಕು ಎಂಬ ನಿಟ್ಟಿನಲ್ಲಿ ನಿರ್ಣಯ ತೆಗೆದುಕೊಳ್ಳಲಾಗಿದೆ. ಇದು ಸೂಕ್ತವಾದ ನಿರ್ಣಯವಾಗಿದೆ ಹಿಂದಿನ ಸರ್ವಸದಸ್ಯರ ಸಾಮಾನ್ಯ ಸಭೆಯಲ್ಲಿ ಸಂವಿಧಾನಾತ್ಮವಾಗಿ ಬರುವ ಸದಸ್ಯರಿಗೆ ಮಾತ್ರ ಸದಸ್ಯತ್ವ ಕೊಡಬೇಕು ಎಂದು ನಿರ್ಣಯಿಸಲಾಗಿತ್ತು ಎಂದು ಮಹಾಪ್ರಧಾನ ಕಾರ್ಯದರ್ಶಿಗಳು ತಿಳಿಸಿದರು.

ಸದಸ್ಯರಾದ ಶ್ರೀ ಯಜಮಾನ್ ಪಾಲನೇತ್ರರವರು ಮಾತನಾಡಿ, ಸರ್ಕಾರ ನೀಡಿರುವ 2 ಎಕರೆ ಜಾಗದಲ್ಲಿ ವಿದ್ಯಾಸಂಸ್ಥೆಯನ್ನು ಮಹಾಸಭಾ ವತಿಯಿಂದ ಪ್ರಾರಂಭ ಮಾಡಲು ತಿಳಿಸಿದರು. ಸರ್ಕಾರ ನೀಡಿರುವ ಜಾಗದಲ್ಲಿ ಮೊದಲು ವಿದ್ಯಾರ್ಥಿ/ವಿದ್ಯಾರ್ಥಿನಿಯರಿಗೆ ವಸತಿ ನಿಲಯವನ್ನು ಪ್ರಾರಂಭ ಮಾಡಬೇಕು. ಹಾಗೆಯೇ ತಮ್ಮ ಪ್ರಸ್ತಾವನೆಯನ್ನು ಗಮನದಲ್ಲಿಡಲಾಗುವುದು ಎಂದು ಮಹಾಪ್ರಧಾನ ಕಾರ್ಯದರ್ಶಿಗಳು ತಿಳಿಸಿದರು.

**ನಿರ್ಣಯ:–**

**ದಿನಾಂಕ: 25–12–2016ರಂದು ನಡೆದ 2016–17ನೇ ಸಾಲಿನ 43ನೇ ವಾರ್ಷಿಕ ಸರ್ವಸದಸ್ಯರ ಸಾಮಾನ್ಯ ಸಭೆಯ ನಡವಳಿಗಳನ್ನು ಓದಿ ಅಂಗೀಕರಿಸಲಾಗಿದೆಯೆಂದು ತೀರ್ಮಾನಿಸಲಾಯಿತು.**

**ಸೂಚಕರು :– ಶ್ರೀ ಎಂ.ಎಸ್.ಕೋರಿಶೆಟ್ಟರ್, ಹಾವೇರಿ**
**ಅನುಮೋದಕರು :– ಶ್ರೀ ಬಿ.ಹೆಚ್.ಬಾದರಬಂಡಿ, ವಿಜಯಪುರ**

**ವಿಷಯ ನಂ 5 :– 2016–17ನೇ ಸಾಲಿನ 'ವಾರ್ಷಿಕ ವರದಿ' ಮಂಡನೆ–ಅಂಗೀಕಾರ.**

**ಈ ವಿಷಯವನ್ನು ಮಹಾಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಈಶ್ವರ್ ಖಂಡ್ರೆಯವರು ಮಂಡಿಸಿ,** ತಮಗೆ ಕೊಟ್ಟಿರುವ

ವಾರ್ಷಿಕ ವರದಿಯ ಪುಸ್ತಕದ ಪುಟ ನಂ 34 ರಿಂದ 60 ರವರೆಗೆ 2016–17ನೇ ಸಾಲಿನ 43ನೇ ವಾರ್ಷಿಕ ವರದಿಯನ್ನು ಮುದ್ರಿಸಲಾಗಿದೆ. ಈ ಸಾಲಿನಲ್ಲಿ ನಡೆದ ಕಾರ್ಯಚಟುವಟಿಕೆಗಳ ಬಗ್ಗೆ ಸವಿಸ್ತಾರವಾಗಿ ವಿವರಿಸಲಾಗಿದೆ. ಮಾನ್ಯ ಸದಸ್ಯರು ಇದಕ್ಕೆ ತಮ್ಮ ಒಪ್ಪಿಗೆಯನ್ನು ಸೂಚಿಸಲು ಕೋರಿದರು.

ಶ್ರೀ ಎನ್.ಕೇಶವ್‌ಕುಮಾರ್‌ರವರು ಮಾತನಾಡಿ, ಹುಣಸಮಾರನಹಳ್ಳಿ ಮಠದ ಸ್ವಾಮಿಗಳನ್ನು ಮಠದಿಂದ ಬಹಿಷ್ಕರಿಸುವಂತೆ ಧರಣಿ ನಡೆಸಿದ್ದೆವು ಅದು ವಾರ್ಷಿಕ ವರದಿಯಲ್ಲಿ ಪ್ರಕಟಿಸಿರುವುದಿಲ್ಲವೆಂದರು. ಈ ವರದಿಯು 2016ರ ಏಪ್ರಿಲ್‌ನಿಂದ 2017ರ ಮಾರ್ಚ್ ತಿಂಗಳವರೆಗೆ ಮುದ್ರಿಸಲಾಗಿದೆ ಎಂದು ಮಹಾಪ್ರಧಾನ ಕಾರ್ಯದರ್ಶಿಗಳು ತಿಳಿಸಿದರು.

ನಂತರ ಎಲ್ಲಾ ಸದಸ್ಯರು 2016–17ನೇ ಸಾಲಿನ ವಾರ್ಷಿಕ ವರದಿಗೆ ಸರ್ವಾನುಮತದಿಂದ ಒಪ್ಪಿಗೆಯನ್ನು ಸೂಚಿಸಿದರು.

**ನಿರ್ಣಯ:–**

**2016–17ನೇ ಸಾಲಿನ 43ನೇ ವಾರ್ಷಿಕ ವರದಿಯನ್ನು ಸರ್ವಾನುಮತದಿಂದ ಅಂಗೀಕರಿಸಲಾಗಿದೆಯೆಂದು ತೀರ್ಮಾನಿಸಲಾಯಿತು.**

**ಸೂಚಕರು :– ಶ್ರೀಮತಿ ಪಂಕಜಾ ಮಲ್ಲಿಕಾರ್ಜುನ್, ಚಿಕ್ಕಮಗಳೂರು**

**ಅನುಮೋದಕರು :– ಶ್ರೀ ಎನ್.ಎಸ್.ನಟರಾಜ್, ನೆಲಮಂಗಲ**

**ವಿಷಯ ನಂ 7 :– 2016–17ನೇ ಸಾಲಿನ ಲೆಕ್ಕಪರಿಶೋಧಕರ ವರದಿ ಮಂಡನೆ ಮತ್ತು ಅಂಗೀಕಾರ.**

**ಈ ವಿಷಯವನ್ನು ಮಹಾಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಈಶ್ವರ್ ಖಂಡ್ರೆಯವರು ಮಂಡಿಸಿ,** ಸದಸ್ಯರಿಗೆ ಕೊಟ್ಟಿರುವ ವಾರ್ಷಿಕ ವರದಿಯ ಪುಸ್ತಕದ ಪುಟ ನಂ. 63 ರಿಂದ 72 ರವರೆಗೆ ಲೆಕ್ಕ ಪರಿಶೋಧಿಸಿದ 2016–17ನೇ ಸಾಲಿನ ಲೆಕ್ಕ ಪತ್ರಗಳನ್ನು ಹಾಗೂ ಲೆಕ್ಕ ಪರಿಶೋಧಕರ ವರದಿಯನ್ನು ಮುದ್ರಿಸಲಾಗಿದ್ದು, ಮಾನ್ಯ ಸದಸ್ಯರು ಇವುಗಳನ್ನು ಪರಿಶೀಲಿಸಿ, ಏನಾದರೂ ವಿವರಣೆ ಬೇಕಾಗಿದ್ದರೆ ಕೇಳಿ ಒಪ್ಪಿಗೆಯನ್ನು ಕೊಡಬೇಕೆಂದು ಕೋರಿದರು.

**ಶ್ರೀ ವಿಶ್ವೇಶ್ವರಯ್ಯ,** ಹೊಸನಗರ, ಶಿವಮೊಗ್ಗ ಜಿಲ್ಲೆ ಹಾಗೂ ಶ್ರೀ ಬಸವರಾಜ್ ದಿಂಡೂರು, ಬೆಂಗಳೂರು ಇವರುಗಳು ಮಾತನಾಡಿ, ಲೆಕ್ಕಪರಿಶೋಧಕರ ವರದಿಯನ್ನು ಕನ್ನಡದಲ್ಲಿ ಮುದ್ರಿಸಬೇಕು ಎಂದು ಮನವಿ ಮಾಡಿದರು. ಇದು ಅಖಿಲ ಭಾರತ ಮಟ್ಟದ ಸಂಸ್ಥೆಯಾಗಿರುವುದರಿಂದ ಎಲ್ಲರಿಗೂ ಅನುಕೂಲವಾಗುವಂತೆ ಇಂಗ್ಲೀಷ್‌ನಲ್ಲೇ ಮುದ್ರಿಸಲಾಗುತ್ತಿದೆ. ಆದಾಗ್ಯೂ ಮುಂದಿನ ದಿನಗಳಲ್ಲಿ ಕನ್ನಡದಲ್ಲಿ ಮುದ್ರಿಸಲಾಗುವುದು ಎಂದು ಮಹಾಪ್ರಧಾನ ಕಾರ್ಯದರ್ಶಿಗಳು ತಿಳಿಸಿದರು.

ಸದಸ್ಯರು ಮಾತನಾಡಿ, ವರದಿಯ ಪುಟ ಸಂಖ್ಯೆ 70 ಶೆಡ್ಯೂಲ್ ಎ ನಲ್ಲಿ ತರಹುಣಿಸೆ ಗ್ರಾಮದಲ್ಲಿ ದಾನ ನೀಡಿರುವ 2 ಎಕರೆ ಜಮೀನಿನ ಮೊತ್ತ ರೂ. 1,98,00,000–00 ಇರುತ್ತದೆ. ಪುಟ ಸಂಖ್ಯೆ 72 ರಲ್ಲಿ ರೂ. 2,11,16,700–00 ಇದ್ದು ವ್ಯತ್ಯಾಸದ ಬಗ್ಗೆ ವಿವರಣೆ ಕೇಳಿದರು. ವರದಿಯ ಪುಟ ಸಂಖ್ಯೆ 68ರಲ್ಲಿ ರೂ.13,16,700/–ಗಳು ರಜಿಸ್ಟ್ರೇಶನ್ ಫೀಯನ್ನು ಸೇರಿಸಿದ್ದು ಒಟ್ಟು ರೂ. 2,11,16,700–00 ರೂಗಳಾಗಿದೆ ಎಂದು ಮಹಾಪ್ರಧಾನ ಕಾರ್ಯದರ್ಶಿಗಳು ತಿಳಿಸಿದರು.

ನಂತರ 2015–16ನೇ ಸಾಲಿನ ಲೆಕ್ಕಪರಿಶೋಧಕರ ವರದಿಗೆ ಎಲ್ಲಾ ಸದಸ್ಯರು ಸರ್ವಾನುಮತದಿಂದ ಒಪ್ಪಿಗೆಯನ್ನು ಸೂಚಿಸಿದರು.

**ನಿರ್ಣಯ:–**

**ಲೆಕ್ಕಪರಿಶೋಧಕರು ಲೆಕ್ಕಪರಿಶೋಧಿಸಿದ 2016–17ನೇ ಸಾಲಿನ ವರದಿಯನ್ನು ಸರ್ವಾನುಮತದಿಂದ ಅಂಗೀಕರಿಸಲಾಯಿತೆಂದು ತೀರ್ಮಾನಿಸಲಾಯಿತು.**

**ಸೂಚಕರು :– ಶ್ರೀ ವಿಶ್ವೇಶ್ವರಯ್ಯ, ಹೊಸನಗರ, ಶಿವಮೊಗ್ಗ ಜಿಲ್ಲೆ**

**ಅನುಮೋದಕರು :– ಶ್ರೀ ಗುರುಮಾದಯ್ಯ, ಚನ್ನಪಟ್ಟಣ, ರಾಮನಗರ ಜಿಲ್ಲೆ**

**ವಿಷಯ ನಂ 8 :– 2016–17ನೇ ಸಾಲಿನ ಮಹಾಸಭೆಯ ವಾರ್ಷಿಕ ಆದಾಯ–ವೆಚ್ಚಗಳ ಅಂದಾಜುಪಟ್ಟಿಯ ಮಂಡನೆ ಹಾಗೂ ಅಂಗೀಕಾರ.**

**ಈ ವಿಷಯವನ್ನು ಮಹಾಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಈಶ್ವರ್ ಖಂಡ್ರೆಯವರು ಮಂಡಿಸಿ,** ವಾರ್ಷಿಕ ವರದಿಯ ಪುಸ್ತಕದ ಪುಟ ಸಂಖ್ಯೆ 61 ಮತ್ತು 62ರಲ್ಲಿ ಮುದ್ರಿಸಿರುವ 2017–18ನೇ ಸಾಲಿನ ಮಹಾಸಭೆಯ ವಾರ್ಷಿಕ ಆದಾಯ–ವೆಚ್ಚಗಳ ಅಂದಾಜುಪಟ್ಟಿಯನ್ನು ಪರಿಶೀಲಿಸಿ ಮಾನ್ಯ ಸದಸ್ಯರುಗಳು ಒಪ್ಪಿಗೆ ಕೊಡಲು ಕೋರಿದರು.

ಸದಸ್ಯರು ಮಾತನಾಡಿ, 2017–18ನೇ ಸಾಲಿನ ಮಹಾಸಭೆಯ ವಾರ್ಷಿಕ ಆದಾಯ–ವೆಚ್ಚಗಳ ಅಂದಾಜುಪಟ್ಟಿಯನ್ನು ಕೊಟ್ಟಿದ್ದೀರಿ. ಈಗಾಗಲೇ 9 ತಿಂಗಳುಗಳು ಕಳೆದುಹೋಗಿವೆ ಈಗ ಅಂದಾಜು ಪಟ್ಟಿಯನ್ನು ಕೊಟ್ಟಿರುತ್ತೀರಿ ಎಂದರು. ಬದಲಾವಣೆ ಮಾಡಿಕೊಳ್ಳಲಾಗುವುದೆಂದು ಮಹಾಪ್ರಧಾನ ಕಾರ್ಯದರ್ಶಿಗಳು ತಿಳಿಸಿದರು.

ನಂತರ 2017–18ನೇ ಸಾಲಿನ ಮಹಾಸಭೆಯ ವಾರ್ಷಿಕ ಆದಾಯ–ವೆಚ್ಚಗಳ ಅಂದಾಜುಪಟ್ಟಿಗೆ ಎಲ್ಲಾ ಸದಸ್ಯರು ಸರ್ವಾನುಮತದಿಂದ ಒಪ್ಪಿಗೆಯನ್ನು ಸೂಚಿಸಿದರು.

**ನಿರ್ಣಯ:–**

**2017–18ನೇ ಸಾಲಿನ ಮಹಾಸಭೆಯ ವಾರ್ಷಿಕ ಆದಾಯ–ವೆಚ್ಚಗಳ ಅಂದಾಜು ಪಟ್ಟಿಗೆ ಸಭೆಯು ಸರ್ವಾನುಮತದಿಂದ ಒಪ್ಪಿಗೆ ಕೊಟ್ಟಿದೆ ಎಂದು ತೀರ್ಮಾನಿಸಲಾಯಿತು.**

**ಸೂಚಕರು :– ಶ್ರೀ ಪಿ.ಕೆ.ಕುಮಾರಸ್ವಾಮಿ, ಚಿತ್ರದುರ್ಗ,**

**ಅನುಮೋದಕರು :– ಶ್ರೀ ಪ್ರಸನ್ನಕುಮಾರ್, ಕೇರಳ**

**ವಿಷಯ ನಂ. 9 :– 2017–18ನೇ ಸಾಲಿಗೆ ಲೆಕ್ಕಪರಿಶೋಧಕರನ್ನು ನೇಮಿಸುವುದು ಮತ್ತು ಅವರ ಸಂಭಾವನೆಯನ್ನು ಗೊತ್ತುಪಡಿಸುವುದು.**

**ಈ ವಿಷಯವನ್ನು ಮಹಾಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಈಶ್ವರ್ ಖಂಡ್ರೆಯವರು ಮಂಡಿಸಿ,** 1974ರಿಂದ ಇಲ್ಲಿಯವರೆಗೂ ಮೆ॥ ಬಿ.ಆರ್.ವಿ.ಗೌಡ ಅಂಡ್ ಕಂಪನಿ, ಬೆಂಗಳೂರು ಇವರು ಮಹಾಸಭೆಯ ಲೆಕ್ಕ–ಪರಿಶೋಧಕರಾಗಿ ಮಹಾಸಭೆಯ ಲೆಕ್ಕಪತ್ರಗಳನ್ನು ಪರಿಶೋಧನೆ ಮಾಡುತ್ತಾ ಬಂದಿದ್ದಾರೆ. ಇವರ ಕೆಲಸವು ತೃಪ್ತಿಕರವಾಗಿರುತ್ತದೆ. ಆದ್ದರಿಂದ 2017–18ನೇ ಸಾಲಿಗೂ ಸಹ ಇವರನ್ನೇ ಲೆಕ್ಕ–ಪರಿಶೋಧಕರನ್ನಾಗಿ ಮುಂದುವರಿಸಬಹುದಾಗಿದೆ. ಇವರ ಸಂಭಾವನೆಯನ್ನು ರೂ.25,000/–(ಇಪ್ಪತ್ತೈದು ಸಾವಿರ) ಅಂತಾ ನಿಗದಿ ಪಡಿಸಬಹುದು. ಇದಕ್ಕೆ ಮಾನ್ಯ ಸದಸ್ಯರುಗಳು ಒಪ್ಪಿಗೆಯನ್ನು ಕೊಡಬೇಕೆಂದು ಕೋರಿದರು. ಇದಕ್ಕೆ ಸಭೆಯು ಸರ್ವಾನುಮತದಿಂದ ಒಪ್ಪಿಗೆ ಸೂಚಿಸಿತು.

**ನಿರ್ಣಯ:–**

**2017–18ನೇ ಸಾಲಿಗೆ ಮೆ॥ ಬಿ.ಆರ್.ವಿ.ಗೌಡ ಮತ್ತು ಕಂಪನಿ, ಚಾರ್ಟರ್ಡ್ ಅಕೌಂಟಟ್ಸ್, ಬೆಂಗಳೂರು ಇವರನ್ನು ಮಹಾಸಭೆಯ ಲೆಕ್ಕ–ಪರಿಶೋಧಕರನ್ನಾಗಿ ನೇಮಿಸಲು ಹಾಗೂ ಇವರಿಗೆ ವಾರ್ಷಿಕ 25,000/–ರೂ.ಗಳ ಸಂಭಾವನೆ ಕೊಡಬೇಕೆಂದು ಸಭೆಯು ಸರ್ವಾನುಮತದಿಂದ ತೀರ್ಮಾನಿಸಲಾಯಿತು.**

**ಸೂಚಕರು :– ಶ್ರೀ ವಿಶ್ವನಾಥ್ ಬಾಬುರಾವ್ ರಿಕ್ಕೆ, ಸೋಲಾಪುರ ಮಹಾರಾಷ್ಟ್ರ**

**ಅನುಮೋದಕರು :– ಶ್ರೀಮತಿ ಮಂಜುಳಾ ಕಿರಣ್, ಬೆಂಗಳೂರು**

**ವಿಷಯ ನಂ. 10:– ಅಧ್ಯಕ್ಷರ ಅಪ್ಪಣೆ ಮೇರೆಗೆ ಇತರೇ ವಿಷಯಗಳು.**

**A) ಸಭೆಯಲ್ಲಿ ಚರ್ಚಿಸಲು ಬಂದಿರುವ ವಿಷಯಗಳು:–**

ಅಧ್ಯಕ್ಷರ ಅಪ್ಪಣೆ ಮೇರೆಗೆ ವಿಷಯಗಳನ್ನು ಪ್ರಸ್ತಾಪಿಸಲು ಸದಸ್ಯರುಗಳಿಂದ ಪತ್ರಗಳು ಬಂದಿರುತ್ತವೆ. ಅದರಲ್ಲಿ ಹಾಜರಿದ್ದವರು ಪ್ರಸ್ತಾಪಿಸಿದ ಪ್ರಶ್ನೆಗಳಿಗೆ ಅಧ್ಯಕ್ಷರ ಅಪ್ಪಣೆಯ ಮೇರೆಗೆ ಮಹಾಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಈಶ್ವರ್ ಖಂಡ್ರೆಯವರು ಸಭೆಯ ಮುಂದೆ ಮಂಡಿಸಿದರು.

**1. ಶ್ರೀ ಪಿ.ಗುರುಮಾದಯ್ಯ, ಅಧ್ಯಕ್ಷರು, ಚನ್ನಪಟ್ಟಣ ತಾಲ್ಲೂಕ ಘಟಕ**

| | ಚರ್ಚೆಯ ವಿಷಯ | ಉತ್ತರಗಳು |
|---|---|---|
| **1.** | ಮುಂದಿನ 5 ವರ್ಷಗಳಲ್ಲಿ 5 ಲಕ್ಷ ಸದಸ್ಯರನ್ನು ಮಾಡಲು ಗ್ರಾಮ ಪಂಚಾಯತ್, ಹೋಬಳಿ, ತಾಲ್ಲೋಕ್ ಹಾಗೂ ಜಿಲ್ಲೆಗಳ ಹಂತದಲ್ಲಿ ಹೆಚ್ಚಿಗೆ ಸದಸ್ಯರನ್ನು ನೊಂದಾಯಿಸಿದ ಅಧ್ಯಕ್ಷರಿಗೆ (3 ಜನ) ಗೌರವಿಸುವುದು. | ಸಲಹೆ ಸೂಕ್ತವಾಗಿದೆ ಕ್ರಮ ಕೈಗೊಳ್ಳಲಾಗುವುದು. |
| **2.** | ರಾಜ್ಯ ಮಟ್ಟದಲ್ಲಿ 3 ಜನ ವಿದ್ಯಾರ್ಥಿಗಳನ್ನು ಗುರುತಿಸಿ (ಪಿ.ಯು.ಸಿ. ಮತ್ತು ಎಸ್.ಎಸ್.ಎಲ್.ಸಿ) ಪ್ರತಿ ವರ್ಷದ ಸಾಮಾನ್ಯ ಸಭೆಯಲ್ಲಿ ಪ್ರತಿಭಾ ಪುರಸ್ಕಾರ ನೀಡುವುದು. | ಅತಿ ಹೆಚ್ಚು ಅಂಕಪಡೆದ 10 ವಿದ್ಯಾರ್ಥಿಗಳನ್ನು ಪುರಸ್ಕರಿಸಲಾಗುವುದು. |
| **3.** | ಹಿರಿಯರ ಜೊತೆಯಲ್ಲಿ ಯುವಕರಿಗೂ ಸ್ಥಾನಮಾನ ಕಲ್ಪಿಸಿಕೊಡಲು ಪ್ರಯತ್ನಿಸುವುದು. | ಈಗಿರುವ ಅವಕಾಶಗಳನ್ನು ಯುವಕರು ಸದ್ಬಳಕೆ ಮಾಡಿಕೊಳ್ಳುವುದು. |
| **4.** | ಸಮಾಜದಲ್ಲಿ ಉಂಟಾಗಿರುವ ಧರ್ಮದ ಗೊಂದಲವನ್ನು ಆದಷ್ಟು ಬೇಗ ನಿವಾರಿಸಲು ಕ್ರಮ ಕೈಗೊಳ್ಳುವುದು. | ಸೂಕ್ತ ಸಮಯದಲ್ಲಿ ನಿರ್ಧಾರ ಕೈಗೊಳ್ಳಲಾಗುವುದು. |

**2. ಶ್ರೀ ನಾಗಣ್ಣ ಬಸಗುಂಡಪ್ಪಾ ಪಾಟೀಲ ಶಂಕರವಾಡಿ, ಶಹಾಬಾದ್, ತಾ॥ ಚಿತ್ತಾಪೂರ, ಜಿಲ್ಲಾ ಕಲಬುರಗಿ**

| | ಚರ್ಚೆಯ ವಿಷಯ | ಉತ್ತರಗಳು |
|---|---|---|
| **1** | ವೀರಶೈವ–ಲಿಂಗಾಯತ ಒಳಪಂಗಡಗಳ ಸಮನ್ವಯ ವ್ಯಾಪ್ತಿಗೆ ಮಹಾಸಭೆಯವರು 'ಕುಡ ಒಕ್ಕಲಿಗ' ಜನಾಂಗದ ಬಾಂಧವರಿಗೆ ನಮ್ಮದೇಯಾದ 'ಜಾತಿ ಮತ್ತು ಆದಾಯ ಪ್ರಮಾಣ ಪತ್ರ' ಒದಗಿಸುವ ಕುರಿತು ಸರ್ಕಾರಕ್ಕೆ ಶಿಫಾರಸ್ಸು ಮಾಡಲು ಮನವಿ. | ಸರ್ಕಾರಕ್ಕೆ ಮನವಿ ಸಲ್ಲಿಸಿ ಪ್ರಮಾಣ ಪತ್ರ ಪಡೆಯಲು ಪ್ರಯತ್ನಿಸಲಾಗುವುದು. |

3. ಶ್ರೀ ಅಯ್ಯಣ್ಣ ಹುಂಡೇಕಾರ, ಅಧ್ಯಕ್ಷರು, ವೀರಶೈವ ಸಮಾಜ ನಗರ ಘಟಕ, ಯಾದಗಿರಿ

| | ಚರ್ಚೆಯ ವಿಷಯ | ಉತ್ತರಗಳು |
|---|---|---|
| 1. | ಮಠಾಧೀಶರು ಹಾಗೂ ಸಮಾಜದ ಪ್ರಮುಖರು ಎಲ್ಲಾ ಸದಸ್ಯರ ಒಪ್ಪಿಗೆಯನ್ನು ಪಡೆದು ಬೆಂಗಳೂರಿನಲ್ಲಿರುವ ಅಖಿಲ ಭಾರತ ವೀರಶೈವ ಲಿಂಗಾಯತ ಭವನ ಎಂದು ನಾಮಕರಣಮಾಡಿ ಇಂದು ನಾವು ವೀರಶೈವ ಬೇರೆ ಲಿಂಗಾಯತರು ಬೇರೆ ಎಂದು ಹೊಡೆದಾಡುತ್ತಿರುವುದು ನಾಚಿಕೆಗೇಡು ಸಂಗತಿಯಾಗಿದ್ದು ಇದರಿಂದ ನಮ್ಮ ಧರ್ಮ ಅವನತಿಯತ್ತ ಸಾಗುತ್ತಿದೆ. ಪ್ರಸ್ತುತ ನಡೆಯಲಿರುವ ವಾರ್ಷಿಕ ಮಹಾಸಭೆಯಲ್ಲಿ ವೀರಶೈವರು ಮತ್ತು ಲಿಂಗಾಯತರು ಒಂದೇ ಎಂದು ಇದರ ಪ್ರಗತಿಗೋಸ್ಕರ ನಾವು ಒಂದಾಗಿ ಶ್ರಮಿಸುತ್ತೇವೆಂದು ಮಹಾತ್ಮ ಶ್ರೀ ಬಸವಣ್ಣನವರ ಹೆಸರಿನಲ್ಲಿ ಪ್ರತಿಜ್ಞೆ ಮಾಡಬೇಕು ಇದಕ್ಕೆ ತಮ್ಮ ಅಭಿಪ್ರಾಯ ತಿಳಿಸಿ. | ವೀರಶೈವ–ಲಿಂಗಾಯತ ಒಂದೇ. ಇದು ಮಹಾಸಭೆಯ ದೃಢವಾದ ನಿಲುವು. ಒಗ್ಗಟ್ಟನ್ನು ಕಾಪಾಡಿಕೊಳ್ಳಲು ಎಲ್ಲಾ ರೀತಿಯ ಪ್ರಯತ್ನ ಮಾಡಲಾಗುವುದು. |
| 2. | ಅಖಿಲ ಭಾರತ ವೀರಶೈವ ಮಹಾಸಭಾದ ಪದಾಧಿಕಾರಿಗಳು ಕೇವಲ ಬೆಂಗಳೂರಿಗೆ ಸೀಮಿತವಾಗದೆ ವರ್ಷಕ್ಕೆ ಒಂದು ಬಾರಿಯಾದರೂ ಪ್ರತಿ ಜಿಲ್ಲೆಗೆ ಬೇಟಿ ನೀಡಿ ಅಲ್ಲಿಯ ಸಮಾಜದ ಚಟುವಟಿಕೆಗಳನ್ನು ಮನಗಂಡು ಮುಂದೆ ಯಾವ ರೀತಿ ಸಮಾಜ ಮುನ್ನಡೆಯಬೇಕೆಂಬುದರ ಬಗ್ಗೆ ಸಲಹೆ ನೀಡಬೇಕಾಗಿ ತಮ್ಮಲ್ಲಿ ನನ್ನ ವಿನಮ್ರ ವಿನಂತಿ. | ಅಧ್ಯಕ್ಷರು ಮತ್ತು ಪದಾಧಿಕಾರಿಗಳು ರಾಜ್ಯ, ಜಿಲ್ಲೆ ಮತ್ತು ತಾಲ್ಲೂಕುಗಳಿಗೆ ಪ್ರವಾಸ ಮಾಡಿದ್ದು ಇನ್ನು ಹೆಚ್ಚು ಹೆಚ್ಚು ಪಾಲ್ಗೊಳ್ಳುವಂತೆ ಮಾಡಲಾಗುವುದು. |

4. ಶ್ರೀ ವಿ.ಕೆ.ಪಾಟೀಲ್, ವಕೀಲರು, ಬೆಳಗಾವಿ

| | ಚರ್ಚೆಯ ವಿಷಯ | ಉತ್ತರಗಳು |
|---|---|---|
| 1. | ಅಖಿಲ ಭಾರತ ವೀರಶೈವ ಮಹಾಸಭೆಯು ಸದ್ಯದ ಬದಲಾದ ಸನ್ನಿವೇಶದಲ್ಲಿ ಲಿಂಗಾಯತ ಮಹಾಸಭೆ ಅಂತಾ ಮರು ನಾಮಕರಣ ಮಾಡಿಕೊಳ್ಳಲು ಏಕೆ ಹಿಂಜರಿಯುತ್ತಿರುವಿರಿ? | ಈ ಬಗ್ಗೆ ವಿಶೇಷ ಸರ್ವಸದಸ್ಯರ ಸಭೆಯಲ್ಲಿ ಚರ್ಚಿಸಬೇಕಾಗಿದೆ. |
| 2. | ಅಖಿಲ ಭಾರತ ವೀರಶೈವ ಮಹಾಸಭೆಯು ಇಬ್ಬರು ಸಚಿವರಾದ ಶ್ರೀ ಎಂ.ಬಿ.ಪಾಟೀಲ, ಮತ್ತು ವಿನಯ ಕುಲಕರ್ಣಿ, ಇವರಿಗೆ ಯಾಕೆ? ಎಚ್ಚರಿಕೆ ನೋಟಿಸು ನೀಡಿಲ್ಲ. ಇದಕ್ಕೆ ಮಹಾಸಭೆಯ ನಿಷ್ಕಾಳಜಿತನ ಹಾಗೂ ನಿರ್ಲಕ್ಷ ಇರುವುದು? | ವಿಘಟನೆಯನ್ನು ತಡೆಯುವ ಸಲುವಾಗಿ ಎಚ್ಚರವಹಿಸಿದ್ದೇವೆ. ಒಟ್ಟುಗೂಡಿಸುವ ಪ್ರಯತ್ನವನ್ನು ಮಾಡುತ್ತಿದ್ದೇವೆ. |
| 3. | ಅಖಿಲ ಭಾರತ ವೀರಶೈವ ಮಹಾಸಭೆಯ ಸಚಿವರಾದ ಶ್ರೀ ಬಸವರಾಜ ರಾಯರೆಡ್ಡಿ, ಶ್ರೀಮತಿ ಗೀತಾ ಪ್ರಸಾದ, ಶ್ರೀ ಶರಣ ಪ್ರಕಾಶ್ ಪಾಟೀಲ, ಶ್ರೀ ಎಸ್.ಎಸ್.ಮಲ್ಲಿಕಾರ್ಜುನ, ಶ್ರೀ ಈಶ್ವರ ಖಂಡ್ರೆ ಇವರು ಲಿಂಗಾಯತ ಧರ್ಮ ಸ್ಥಾಪನೆಗೆ ಯಾಕೆ ಮೌನ ವಹಿಸಿದ್ದಾರೆ. | ಇವರೆಲ್ಲರು ಮಹಾಸಭೆಯ ನಿಲುವಿಗೆ ಬದ್ಧರಾಗಿದ್ದಾರೆ. |
| 4. | ಲಿಂಗಾಯತ ಧರ್ಮ ಹೋರಾಟದ ವಿಷಯದಲ್ಲಿ ಮಹಾಸಭೆಯು ಮೀನ ಮೇಷ ಮಾಡಿ ಲಿಂಗಾಯತರಲ್ಲಿ ಎರಡು ಭಾಗಗಳಾಗಲು ಕಾರಣವಾಗಿದೆ. ಹಾಗೇ ಲಿಂಗಾಯತರ ಮೇಲೆ ಹಿಡಿತ ಸಾಧಿಸುವಲ್ಲಿ ವಿಫಲವಾಗಿದೆ? | ನಿಮ್ಮದು ತಪ್ಪು ಅಭಿಪ್ರಾಯವಾಗಿದೆ. |

| | | |
|---|---|---|
| 5. | ಜಗತ್ತು ಬದಲಾಗುತ್ತದೆ. ಆದರೆ, ಮಹಾಸಭೆಯು ಇನ್ನೂ ಹಳೆಯದಾದ ಅವೈಜ್ಞಾನಿಕ ವೀರಶೈವ ಪದ ಬಳಸಿ ಲಿಂಗಾಯತ ಸಮಾಜಕ್ಕೆ ಕಂಟಕವಾಗುತ್ತಿರುವುದು ಸ್ಪಷ್ಟ. ಆದ್ದರಿಂದ ಮಹಾಸಭೆಯು ಬದಲಾವಣೆಗೆ ಯಾವ ಕ್ರಮ ಜರುಗಿಸಿದ್ದೀರಿ? | ಪ್ರಶ್ನೆಯು ಮರು ರೂಪದಲ್ಲಿ ಕೇಳಲಾಗಿದೆ. |
| 6. | ಮಹಾಸಭೆಯ ಇಬ್ಬರು ಸಚಿವರನ್ನು ಮುಂದುಮಾಡಿ 5 ಸಚಿವರು ಮೌನ ವಹಿಸಲು ತಿಳಿಸಿದಂತೆ ಕಾಣಿಸುವುದು? | ಪ್ರಶ್ನೆಯು ಮರು ರೂಪದಲ್ಲಿ ಕೇಳಲಾಗಿದೆ. |
| 7. | ಅದರಂತೆ ತಾವು ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪ್ರಶಸ್ತಿ ಪತ್ರ ನೀಡುತ್ತಿರುವಿರಿ. ಅದು ಉಪಯೋಗಕ್ಕೆ ಬರಲಾರದಂತಹದು. ಅದನ್ನು ಲಿಂಗಾಯತರು ಯಾವುದೇ ನೌಕರಿ ಸಂದರ್ಶನದಲ್ಲಿ ತೋರಿಸಿದರೇ ನಾಚಿಕೆಯಾಗುವುದು. ಏಕೆಂದರೆ ಪ್ರಮಾಣ ಪತ್ರದಲ್ಲಿ ಅನೇಕ ತಪ್ಪುಗಳಿವೆ ಅದನ್ನು ನೋಡಿದರೆ, ಅಸಹ್ಯವಾಗುವುದು? ಇದನ್ನು ತಿದ್ದಿಕೊಳ್ಳಲು ಯಾವ ಕ್ರಮ ಜರುಗಿಸಿರುವಿರಿ. | ನಮಗೆ ತಪ್ಪು ತಿಳಿಯುತ್ತಿಲ್ಲ. ತಪ್ಪು ತೋರಿಸಿದರೆ ಸರಿಪಡಿಸಲು ಕ್ರಮವಹಿಸಲಾಗುವುದು. |
| 8. | ಕೊನೆಯದಾಗಿ ಅಖಿಲ ಭಾರತ ವೀರಶೈವ ಮಹಾಸಭೆ ಲಿಂಗಾಯತ ಸಮಾಜದ ಮೇಲೆ ಹಿಡಿತ ಇಲ್ಲದೇ ಇರುವುದರಿಂದ ಲಿಂಗಾಯತ ಹಾಗೂ ವೀರಶೈವ ಅಂತಾ ಇಬ್ಭಾಗವಾಗಿದೆ? | ತಪ್ಪು ಅಭಿಪ್ರಾಯವಾಗಿದೆ. |
| 9. | ಎಲ್ಲರೂ ಲಿಂಗಾಯತ ಧರ್ಮದ ಪಥದಲ್ಲಿ ನಡೆಯೋಣ ಅಂತಾ ಠರಾವು ಪಾಸುಮಾಡಿ ಲಿಂಗಾಯತ ಧರ್ಮ ಒಡೆಯದಂತೆ ಕ್ರಮ ಜರುಗಿಸಿರಿ. | ತಪ್ಪು ಅಭಿಪ್ರಾಯವಾಗಿದೆ. |

**5. ಶ್ರೀ ಎಲ್.ಎಸ್.ಮಲ್ಲಿಕಾರ್ಜುನ, ಸದಾಶಿವನಗರ, ಬೆಂಗಳೂರು**

| | ಚರ್ಚೆಯ ವಿಷಯ | ಉತ್ತರಗಳು |
|---|---|---|
| 1 | ಪ್ರಸ್ತುತ ವೀರಶೈವ–ಲಿಂಗಾಯತ ಧರ್ಮ ಹಾಗೂ ಪ್ರತ್ಯೇಕ ಲಿಂಗಾಯತ ಧರ್ಮದ ನಡುವೆ ಸೃಷ್ಟಿಯಾಗಿರುವ ಕಂದಕ/ ಗೊಂದಲಗಳು ಮತ್ತು ವಿವಿಧ ಮಠಾಧೀಶರುಗಳು ಧರ್ಮದ ಹಿತೈಷಿಗಳು, ಸಮಾಜದ ಮುಖಂಡರು ನೀಡುತ್ತಿರುವ ಅಸಂಬದ್ಧ ಹೇಳಿಕೆಗಳು ಹಾಗೂ ನಡವಳಿಗಳು ಸಾಮಾಜಿಕ ದೃಷ್ಟಿಯಲ್ಲಿ ಅನಾರೋಗ್ಯಕರವಾಗಿರುತ್ತವೆ.<br>ಮತ/ಧರ್ಮದ ಸಂಘರ್ಷಣೆಗಳಿಂದ ಹೊರಬರಲು ನೀರ್ಧರಿಸುತ್ತಾ ನಾನು ನನ್ನ ಸದಸ್ಯತ್ವಕ್ಕೆ ರಾಜೀನಾಮೆಯನ್ನು ಸಲ್ಲಿಸುತ್ತಿದ್ದೇನೆ. ದಯಮಾಡಿ ನನ್ನ ರಾಜೀನಾಮೆಯನ್ನು ಅಂಗೀಕರಿಸಲು ಕಳಕಳಿಯಿಂದ ವಿನಂತಿಸಿದ್ದಾರೆ. | ಸದಸ್ಯತ್ವಕ್ಕೆ ತಾವು ಕೊಟ್ಟಿರುವ ರಾಜೀನಾಮೆಯನ್ನು ಅಂಗೀಕರಿಸಲಾಗಿದೆ. |

**6. ಶ್ರೀ ಆರ್.ಪುಟ್ಟಮಲ್ಲಪ್ಪ, ಚಾಮರಾಜನಗರ**

| | ಚರ್ಚೆಯ ವಿಷಯ | ಉತ್ತರಗಳು |
|---|---|---|
| 1. | ನಮ್ಮ ವೀರಶೈವ ಲಿಂಗಾಯತ ಧರ್ಮವನ್ನು ಕೇಂದ್ರ ಸರ್ಕಾರದವರು ಯಾವ ನಮೂನೆ ಸೇರಿಸಿದ್ದಾರೆ ಎಂಬುದರ ಬಗ್ಗೆ ಚರ್ಚೆಮಾಡಲು ಇಚ್ಛಿಸಿದ್ದೇನೆ. | ವೀರಶೈವ ಲಿಂಗಾಯತಕ್ಕೆ ಸಾಮಾನ್ಯ ವರ್ಗದಲ್ಲಿ ಪರಿಗಣಿಸಿದ್ದಾರೆ. |

**7. ಶ್ರೀ ರವಿಕಾಂತ್ ಎಸ್.ಎಸ್.ಗೌಡ, ಹಾಸನ**

| | ಚರ್ಚೆಯ ವಿಷಯ | ಉತ್ತರಗಳು |
|---|---|---|
| 1. | ವೀರಶೈವ ಲಿಂಗಾಯತರಿಗೆ ಉದ್ಯೋಗದಲ್ಲಿ 20% ಮೀಸಲಾತಿ | ಕಾರ್ಯಸಾದುವಲ್ಲ. |
| 2. | ರೈತರಿಗೆ ಬ್ಯಾಂಕಿನಲ್ಲಿ ಬೆಳೆಸಾಲ, ಬಡವರಿಗೆ ಮನೆ ಹಂಚಿಕೊಡುವುದು | ಕಾರ್ಯಸಾದುವಲ್ಲ |
| 3. | IAS, IPS, IRS, IFS, FDC, SDC ಎಲ್ಲಾ ದರ್ಜೆಗಳಲ್ಲಿ ನೇಮಕಾತಿ | ತರಬೇತಿ ಕೇಂದ್ರವನ್ನು ತೆರೆಯುವ ಉದ್ದೇಶವನ್ನು ಹೊಂದಲಾಗಿದೆ. |
| 4. | ವೀರಶೈವ ಜನರ ರೀತಿ, ನೀತಿ, ಕಾರ್ಯಕ್ಷಮತೆ, ಉದ್ಯೋಗ ತರಬೇತಿ ನೀಡುವುದು | ತರಬೇತಿ ಕೇಂದ್ರವನ್ನು ತೆರೆಯುವ ಉದ್ದೇಶವನ್ನು ಹೊಂದಲಾಗಿದೆ. |
| 5. | ಎಲ್ಲಾ ರಂಗಗಳಲ್ಲೂ ಉದ್ಯಮ, ಕೃಷಿ, ಹೋಟೆಲ್, ಅಂಗಡಿ ವೀರಶೈವರಿಗೆ ತರಬೇತಿ ನೀಡುವುದು. | ಕಾರ್ಯಸಾದುವಲ್ಲ |
| 6 | ಹಳೆಯ ಕಂದಾಚಾರ ಬಿಟ್ಟು ಅಂತರರಾಷ್ಟ್ರೀಯ ಮಟ್ಟದಲ್ಲಿ ವೀರಶೈವರಾಗಬೇಕು. | ಸೂಕ್ತವಾಗಿದೆ. |

**8. ಶ್ರೀ ಗುರುಕಾವುದವಾಡಿ, ಚಾಮರಾಜನಗರ ಇವರು ಮಾತನಾಡಿ,**

ಪ್ರತಿದಿನ ಪತ್ರಿಕೆಗಳಲ್ಲಿ ಮತ್ತು ದೃಶ್ಯಮಾಧ್ಯಮಗಳಲ್ಲಿ ವೀರಶೈವ ಲಿಂಗಾಯತ ಬಗ್ಗೆ ಬರುತ್ತಿರುವ ವಿಚಾರಗಳು ನೋಡಿದರೆ ನಾವೆಲ್ಲಾ ಮುಜುಗರಪಟ್ಟುಕೊಳ್ಳಬೇಕು. ಸಿದ್ಧಗಂಗಾ ಶ್ರೀಗಳ ಬಗ್ಗೆ ಲಘುವಾಗಿ ಮಾತನಾಡುತ್ತಿರುವವರಿಗೆ ಮಹಾಸಭೆಯಿಂದ ಯಾವುದೇ ರೀತಿಯ ಕ್ರಮ ಜರುಗಿಸಿರುವುದಿಲ್ಲವೆಂದರು. ಇದರ ಬಗ್ಗೆ ಈಗಾಗಲೇ ಚರ್ಚೆ ಮಾಡಿದ್ದೇವೆ. ವೀರಶೈವ ಲಿಂಗಾಯತ ಎರಡೂ ಒಂದೇ ಎಂಬುದು ಮಹಾಸಭೆಯ ನಿಲುವು. ಮಹಾಸಭೆಯ ಪದಾಧಿಕಾರಿಗಳನ್ನು ಒಳಗೊಂಡಂತೆ ಎಲ್ಲರೂ ಯಾವುದೇ ಮಾಧ್ಯಮಗಳಲ್ಲಿ ಹೇಳಿಕೆಗಳನ್ನು ಕೊಡುವುದಕ್ಕೆ ಮಹಾಸಭೆಯಿಂದ ಅನುಮತಿ ನೀಡಿಲ್ಲ. ಕೆಲವರಿಗೆ ಮಾತ್ರ ಅನುಮತಿ ನೀಡಲಾಗಿದೆ. ಯಾಕೆಂದರೆ ಎಲ್ಲರೂ ಮಾಧ್ಯಮದಲ್ಲಿ ಮಾತನಾಡಿದರೆ ತಪ್ಪು ಸಂದೇಶ ಹೋಗುತ್ತದೆ ಎಂದು ಮಹಾಪ್ರಧಾನ ಕಾರ್ಯದರ್ಶಿಗಳು ತಿಳಿಸಿದರು.

**9 ಶ್ರೀ ಓ.ಎಂ.ಬಸವರಾಜು, ಜ್ಞಾನಭಾರತಿ 2ನೇ ವಿಭಾಗ, ಬೆಂಗಳೂರು–56**

| | ಚರ್ಚೆಯ ವಿಷಯ | ಉತ್ತರಗಳು |
|---|---|---|
| 1 | 2 ಎಕರೆ ಜಮೀನು ರಾಜ್ಯ ಸರ್ಕಾರ ಗುತ್ತಿಗೆ ಆಧಾರದ ಮೇಲೆ ನೀಡಿದೆ. ಗುತ್ತಿಗೆ ಅವಧಿ ಮತ್ತು ಮೌಲ್ಯ (ಬೆಲೆ) ತಿಳಿಸಿ.<br>ಬೆಂಗಳೂರು ನಗರ ಜಿಲ್ಲೆ, ದಾಸನಪುರ ಹೋಬಳಿಯ ಮಾಚೋಹಳ್ಳಿಯಲ್ಲಿ 2 ಎಕರೆ ಜಮೀನು ನೀಡಿದೆಯೆಂದು ದಿನಾಂಕ 12–12–2017ರಂದು ವಿಜಯ ಕರ್ನಾಟಕದಲ್ಲಿ ಪ್ರಕಟವಾಗಿರುವ ಪ್ರಕಟಣೆ ಬಗ್ಗೆ. | ಒಂದು ವರ್ಷಕ್ಕೆ ಎಕರೆಗೆ ಒಂದು ಲಕ್ಷ ರೂಪಾಯಿಗಳು. ಗುತ್ತಿಗೆಯ ಅವಧಿ 30 ವರ್ಷಗಳು |

**ವಿಷಯ ನಂ. 10:– ಅಧ್ಯಕ್ಷರ ಅಪ್ಪಣೆ ಮೇರೆಗೆ ಇತರೇ ವಿಷಯಗಳು.**

**A) ಅಭಿನಂದನೆ:–**

1. ಕೇರಳ ರಾಜ್ಯದ ಶಿಕ್ಷಣ ಇಲಾಖೆಯ ಶಾಲಾ ಪಠ್ಯ ಪುಸ್ತಕದಲ್ಲಿ ಬಸವಾದಿ ಶರಣರ ಬಗ್ಗೆ ಪಠ್ಯವನ್ನು ಅಳವಡಿಸಿಕೊಂಡಿರುವುದಕ್ಕೆ ಕೇರಳ ರಾಜ್ಯದ ಮಾನ್ಯ ಮುಖ್ಯಮಂತ್ರಿಗಳನ್ನು, ಕೇರಳ ರಾಜ್ಯ ಸರ್ಕಾರವನ್ನು ಹಾಗೂ ಇದಕ್ಕೆ ಶ್ರಮಿಸಿದ ಕೇರಳ ರಾಜ್ಯ ಘಟಕದ ಅಧ್ಯಕ್ಷರಾದ ಶ್ರೀ ಟಿ.ಪಿ.ಕುಂಜುಮನ್‌ರವರನ್ನು ಮಹಾಸಭೆ ಹೃತ್ಪೂರ್ವಕವಾಗಿ ಅಭಿನಂದಿಸುತ್ತದೆ.
2. ಇಸ್ರೋ ಅಧ್ಯಕ್ಷರಾದ ಪದ್ಮಶ್ರೀ ಡಾ.ಎ.ಎಸ್.ಕಿರಣ್‌ಕುಮಾರ್‌ರವರು ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದಿಂದ ಗೌರವ ಡಾಕ್ಟರೇಟ್ ಪದವಿ ಪುರಸ್ಕೃತರಾಗಿದ್ದು ಅವರನ್ನು ಮಹಾಸಭೆಯು ಹೃತ್ಪೂರ್ವಕವಾಗಿ ಅಭಿನಂದಿಸುತ್ತದೆ.
3. ವಿದ್ಯಾರ್ಥಿನಿಲಯ ಮತ್ತು ವಿದ್ಯಾಸಂಸ್ಥೆಗಳ ನಿರ್ಮಾಣಕ್ಕಾಗಿ ಬೆಂಗಳೂರು ನಗರ ಜಿಲ್ಲೆ, ದಾಸನಪುರ ಹೋಬಳಿ, ಮಾಚೋಹಳ್ಳಿ ಗ್ರಾಮದ ಸರ್ವೆನಂ. 81ರಲ್ಲಿ ಗುತ್ತಿಗೆ ಆಧಾರದ ಮೇಲೆ 2 ಎಕರೆ ಜಮೀನನ್ನು ರಾಜ್ಯ ಸರ್ಕಾರವು ಮಹಾಸಭೆಗೆ ಮಂಜೂರು ಮಾಡಿದ್ದು ಇದಕ್ಕಾಗಿ ರಾಜ್ಯ ಸರ್ಕಾರವನ್ನು ಹೃತ್ಪೂರ್ವಕವಾಗಿ ಅಭಿನಂದಿಸುತ್ತದೆ. ಹಾಗೆಯೇ ಜಮೀನನ್ನು ಮಹಾಸಭೆಗೆ ಗುರುತಿಸಿಕೊಟ್ಟ ರಾಜ್ಯ ಘಟಕದ ಕಾರ್ಯನಿರ್ವಾಹಕ ಸಮಿತಿ ಸದಸ್ಯರಾದ **ಶ್ರೀ ಎನ್.ನಂಜುಂಡೇಶ್‌ರವರ** ಸೇವೆಯನ್ನು ಮಹಾಸಭೆಯು ಶ್ಲಾಘಿಸಿ ಅಭಿನಂದನೆಗಳನ್ನು ಸಲ್ಲಿಸುತ್ತದೆ.

ಮಹಾಸಭೆಯ ಕಾರ್ಯಕಾರಿ ಸಮಿತಿ ಸದಸ್ಯರಾದ ಶ್ರೀ ಬಿ.ಎಸ್.ಪುಟ್ಟರಾಜುರವರು ಮಾತನಾಡಿ, ನೆಲಮಂಗಲ ತಾಲ್ಲೂಕಿನ ಶ್ರೀನಿವಾಸಪುರ ಗ್ರಾಮದಲ್ಲಿ ಸರ್ಕಾರಿ ಜಮೀನನ್ನು ಪಡೆಯಲು ಪ್ರಯತ್ನಪಟ್ಟಿದ್ದು ಆ ಕಡತ ಜಿಲ್ಲಾಧಿಕಾರಿಯವರ ಕಛೇರಿಯಲ್ಲಿರುತ್ತದೆ. ಸದರಿ ಜಮೀನನ್ನು ಮಹಾಸಭೆಗೆ ಪಡೆಯಲು ಸಹಾಯ ಸಹಕಾರ ಕೊಡಬೇಕೆಂದು ವಿನಂತಿಸಿದರು. ಎಲ್ಲಾ ರೀತಿಯ ಸಹಾಯ–ಸಹಕಾರ ನೀಡಲಾಗುವುದು ಎಂದು ಮಹಾಪ್ರಧಾನ ಕಾರ್ಯದರ್ಶಿಗಳು ತಿಳಿಸಿದರು.

ಸದಸ್ಯರಾದ ಶ್ರೀ ಜೆ.ಸಿ.ಪುರ ಜಗದೀಶ್‌ರವರು ಮಾತನಾಡಿ, ವೀರಶೈವ ಲಿಂಗಾಯತ ಎರಡೂ ಒಂದೇ ಎಂದು ಮಹಾಸಭಾ ಗಟ್ಟಿನಿಲುವನ್ನು ತಳೆದಿರುವುದು ಅಭಿನಂದನಾರ್ಹವಾಗಿದೆ. ಇದನ್ನು ಅಖಿಲ ಭಾರತ ವೀರಶೈವ ಮಹಾಸಭಾವನ್ನು ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ಎಂದು ಬದಲಾವಣೆ ಮಾಡಲು ಮನವಿ ಮಾಡಿದರು. ಈ ಕುರಿತು ಸಂವಿಧಾನ ತಿದ್ದುಪಡಿ ಸಮಿತಿಯಲ್ಲಿ ಮಂಡಿಸಿ ನಿರ್ಣಯ ತೆಗೆದುಕೊಳ್ಳಲಾಗುವುದು ಎಂದು ಮಹಾಪ್ರಧಾನ ಕಾರ್ಯದರ್ಶಿಗಳು ತಿಳಿಸಿದರು.

ಕೇರಳ ರಾಜ್ಯದ ಸದಸ್ಯರಾದ ಶ್ರೀ ಪಿ.ಎಸ್.ರವೀಂದ್ರನ್ ಮಾತನಾಡಿ, ಕೇರಳ ರಾಜ್ಯದಲ್ಲಿ ಅಖಿಲ ಭಾರತ ವೀರಶೈವ ಮಹಾಸಭೆಯ ಕೇರಳ ರಾಜ್ಯ ಘಟಕವಿದೆ. ಅಲ್ಲಿ ತುಂಬಾ ಗೊಂದಲದ ವಾತಾವರಣ ಇದೆ. ಮಹಾಸಭೆಯಲ್ಲಿ ಪ್ರತಿಬಾರಿ ಆಡಿಟ್ ಮಾಡಿಸುತ್ತಾರೆ. ಆದರೆ ಕೇರಳ ರಾಜ್ಯ ಘಟಕದಲ್ಲಿ ಆಡಿಟ್ ಮಾಡಿಸುತ್ತಿಲ್ಲ. ಘಟಕದ ಅಧ್ಯಕ್ಷರಾದ ಶ್ರೀ ಟಿ.ಪಿ.ಕುಂಜುಮನ್‌ರವರು ಆಜೀವ ಸದಸ್ಯರಾಗಿದ್ದಾರೆ. ರಾಜ್ಯ ಘಟಕದ ಅಧ್ಯಕ್ಷರಾದವರು ಮಹಾಸಭೆಯ ಸಂವಿಧಾನದ ಪ್ರಕಾರ ಉಪಪೋಷಕ ಸದಸ್ಯತ್ವವನ್ನು ಪಡೆಯಬೇಕು ಎಂದರು. ಶ್ರೀ ಟಿ.ಪಿ.ಕುಂಜುಮನ್‌ರವರು ದಿನಾಂಕ 9–1–2013ರಂದು ಆರ್.ಟಿ.ಜಿ.ಎಸ್.ಮೂಲಕ ರೂ. 2250/– ಗಳನ್ನು ಮಹಾಸಭೆಗೆ ತುಂಬಿರುತ್ತಾರೆ. ಆದರೆ ಇದು ಕಣ್ತಪ್ಪಿನಿಂದ ಬಿಟ್ಟುಹೋಗಿತ್ತು. ನಂತರ ಇದನ್ನು ಸರಿಪಡಿಸಿದ್ದು, ಶ್ರೀ ಟಿ.ಪಿ.ಕುಂಜುಮನ್‌ರವರು ಉಪಪೋಷಕ ಸದಸ್ಯತ್ವವನ್ನು ಪಡೆದಿದ್ದಾರೆ ಹಾಗೂ ತಾವು ಸಲ್ಲಿಸಿರುವ ದೂರನ್ನು ಪರಿಶೀಲಿಸಲು ಒಂದು ಸಮಿತಿಯನ್ನು ರಚನೆಮಾಡಿ ವರದಿಯನ್ನು ಪಡೆದು ಸೂಕ್ತಕ್ರಮ ಜರುಗಿಸಲಾಗುವುದು ಎಂದು ಮಹಾಪ್ರಧಾನ ಕಾರ್ಯದರ್ಶಿಗಳು ತಿಳಿಸಿದರು.

ಸದಸ್ಯರಾದ ಶ್ರೀ ಹರೀಶ್ ಆರಾಧ್ಯರವರು ಮಾತನಾಡಿ, ಪ್ರಸ್ತುತ ನಡೆಯುತ್ತಿರುವ ಗೊಂದಲಗಳಿಗೆ ಗಮನಕೊಡದೇ ವೀರಶೈವ–ಲಿಂಗಾಯತ ಎರಡೂ ಒಂದೇ ಎಂದು ಗಟ್ಟಿ ನಿಲುವನ್ನು ತಳೆದಿರುವುದು ಅಭಿನಂದನಾರ್ಹವಾಗಿದೆ ಇದಕ್ಕೆ ಮಹಾಸಭೆಯ ಅಧ್ಯಕ್ಷರಿಗೆ, ಮಹಾಪ್ರಧಾನ ಕಾರ್ಯದರ್ಶಿಗಳಿಗೆ ಹಾಗೂ ಇತರೇ ಪದಾಧಿಕಾರಿಗಳಿಗೆ ಅಭಿನಂದನೆಯನ್ನು ತಿಳಿಸಿದರು.

ಸದಸ್ಯರಾದ ಶ್ರೀ ಲೋಕೇಶ್, ಮೈಸೂರು ಇವರು ಮಾತನಾಡಿ, ಅಲ್ಪಸಂಖ್ಯಾತರ ಆಯೋಗವು ವೀರಶೈವ ಲಿಂಗಾಯತ ಸಮಾಜವನ್ನು ಅಲ್ಪಸಂಖ್ಯಾತ ಧರ್ಮವೆಂದು ಪರಿಗಣಿಸಲು ತಜ್ಞರ ಸಮಿತಿಯನ್ನು ರಚಿಸಿರುವುದಕ್ಕೆ ಇಂದಿನ ಸಭೆಯಲ್ಲಿ ಒಂದು ಖಂಡನಾ ನಿರ್ಣಯವನ್ನು ಮಾಡಬೇಕು. ನಿವೇಶನ ಖರೀದಿ ಹಾಗೂ ಕಟ್ಟಡ ನಿರ್ಮಾಣಕ್ಕೆ ಜಿಲ್ಲಾ ಘಟಕಗಳು ನೋಂದಾಯಿಸಿದ ಸದಸ್ಯತ್ವದಲ್ಲಿ ಶೇಕಡ 90% ಹಣವನ್ನು ಕೊಡಲಾಗುತ್ತಿದೆ. ಆದರೆ ಈ ಹಣದಿಂದ ನಿವೇಶನಗಳನ್ನು ಪಡೆಯಲು ಸಾಧ್ಯವಿಲ್ಲ. ಅದಕ್ಕಾಗಿ ಎಲ್ಲಾ ಜಿಲ್ಲೆಗಳಲ್ಲಿ ಸರ್ಕಾರಿ ಜಮೀನನ್ನು ಪಡೆಯಲು ಚಾಲನೆ ನೀಡಬೇಕು ಎಂದರು. ಮಹಾಪ್ರಧಾನ ಕಾರ್ಯದರ್ಶಿಗಳು ಮಾತನಾಡಿ ಖಂಡನಾ ನಿರ್ಣಯವನ್ನು ಮಾಡುವ ಅವಶ್ಯಕತೆ ಇಲ್ಲ. ಈಗಾಗಲೇ ಮಾನ್ಯ ಅಧ್ಯಕ್ಷರು ಮಹಾಸಭೆಯ ನಿಲುವನ್ನು ತಿಳಿಸಿದ್ದಾರೆ. ಸರ್ಕಾರಿ ನಿವೇಶನ ಪಡೆಯಲು ಎಲ್ಲಾ ರೀತಿಯ ಸಹಾಯ–ಸಹಕಾರ ನೀಡಲಾಗುವುದು ಎಂದರು.

**ಅಧ್ಯಕ್ಷರ ಭಾಷಣ:–**

ಮಹಾಸಭೆಯ ಅಧ್ಯಕ್ಷರಾದ ಡಾ.ಶಾಮನೂರು ಶಿವಶಂಕರಪ್ಪನವರು ಮಾತನಾಡಿ, ಇದುವರೆಗೂ ನೀವುಗಳೆಲ್ಲ 43ನೇ ಸಾಲಿನ ವಾರ್ಷಿಕ ಸಭೆಯಲ್ಲಿ ಭಾಗವಹಿಸಿ ಅರ್ಥಪೂರ್ಣವಾಗಿ ಚರ್ಚೆ ಮಾಡಿದ್ದೀರಿ. ಹಾಗೆಯೇ ಸರ್ಕಾರದಿಂದ ಸಿಕ್ಕಿರುವ ಜಾಗದಲ್ಲಿ ವಿದ್ಯಾರ್ಥಿ/ವಿದ್ಯಾರ್ಥಿನಿಯರಿಗೆ ಹಾಸ್ಟೆಲ್ ನಿರ್ಮಾಣ ಮಾಡಬೇಕಾಗಿದೆ. ಹಾಗೆಯೇ ಪ್ರಸ್ತುತ ವೀರಶೈವ ಲಿಂಗಾಯತ ಸಮಾಜವನ್ನು ದಾರಿತಪ್ಪಿಸುತ್ತಿರುವ ಹಾಗೂ ಎರಡೂ ಕಡೆಯವರು ಆಯೋಜಿಸುತ್ತಿರುವ ಸಭೆಗಳಲ್ಲಿ ಮಹಾಸಭೆಯ ಯಾವುದೇ ಪದಾಧಿಕಾರಿಗಳು ಭಾಗವಹಿಸಬಾರದು ಎಂದು ನಿರ್ಣಯವನ್ನು ತೆಗೆದುಕೊಂಡು ಯಾರೂ ಸಭೆಗಳಲ್ಲಿ ಭಾಗವಹಿಸುತ್ತಿಲ್ಲ. ಅವರು ಏನು ಮಾಡುತ್ತಾರೋ ಮಾಡಲಿ ಪ್ರತಿದಿನ ಟಿ.ವಿ. ಮತ್ತು ಪೇಪರ್‌ಗಳಲ್ಲಿ ಬರುತ್ತಿರುವ ವಿಷಯಗಳು ತಮಗೆಲ್ಲಾ ತಿಳಿದಿದೆ. ತಾವೆಲ್ಲಾ ಸಮಾಜವನ್ನು ಕಟ್ಟಲು, ಒಟ್ಟುಗೂಡಿಸಲು ನಾವೆಲ್ಲಾ ಪ್ರಯತ್ನಿಸೋಣ. ವೀರಶೈವ ಲಿಂಗಾಯತ ಎರಡೂ ಒಂದೇ ಎಂಬ ಮಹಾಸಭೆಯ ನಿಲುವಿನಲ್ಲಿ ಯಾವುದೇ ಬದಲಾವಣೆ ಇಲ್ಲ. ಮಹಾಸಭೆಯು ಕೈಗೊಳ್ಳುವ ಎಲ್ಲಾ ಕಾರ್ಯಗಳಿಗೆ ಮಾನ್ಯ ಸರ್ವಸದಸ್ಯರುಗಳ ಸಹಾಯ–ಸಹಕಾರ ಅಗತ್ಯ. ಹಾಗೆಯೇ **ಎಲ್ಲರಿಗೂ ಹೊಸ ವರ್ಷ ಹಾಗೂ ಸಂಕ್ರಾಂತಿ ಹಬ್ಬದ ಶುಭಾಷಯಗಳನ್ನು ತಿಳಿಸಿದರು.**

**12. ವಂದನಾರ್ಪಣೆ :–**

ಮಹಾಸಭೆಯ ಕಾರ್ಯದರ್ಶಿಗಳಾದ ಬಿ.ಎಸ್.ಸಚ್ಚಿದಾನಂದ ಮೂರ್ತಿ ಇವರು ಸಭೆಯ ಅಧ್ಯಕ್ಷತೆಯನ್ನು ವಹಿಸಿದ್ದ ಅಧ್ಯಕ್ಷರಿಗೂ, ಪದಾಧಿಕಾರಿಗಳಿಗೂ, ಕಾರ್ಯಕಾರಿ ಸಮಿತಿ ಸದಸ್ಯರುಗಳಿಗೂ, ಸರ್ವಸದಸ್ಯರುಗಳಿಗೂ ಹಾಗೂ ಸರ್ವಸದಸ್ಯರ ಸಭೆ ನಡೆಸಲು ಸ್ಥಳಾವಕಾಶ ಮಾಡಿಕೊಟ್ಟ ಸಿರಿಗೆರೆಯ ತರಳಬಾಳು ಜಗದ್ಗುರುಗಳಾದ ಶ್ರೀ ಶ್ರೀ ಶ್ರೀ ಡಾ.ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮೀಜಿಯವರಿಗೆ ಮತ್ತು ಮಹಾಸಭೆಯ ಸಿಬ್ಬಂದಿಯವರಿಗೂ ಧನ್ಯವಾದಗಳನ್ನು ತಿಳಿಸಿದರು.

**(ಈಶ್ವರ ಖಂಡ್ರೆ, ಶಾಸಕರು)**
ಮಹಾಪ್ರಧಾನ ಕಾರ್ಯದರ್ಶಿ

**(ಡಾ. ಶಾಮನೂರು ಶಿವಶಂಕರಪ್ಪ, ಶಾಸಕರು)**
ಅಧ್ಯಕ್ಷರು